ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly, KOPPA-CHM. ಫೋನ್ : ೧೧೪

೧೧ನೇ ವರ್ಷ ೧ನೇ ಸಂಚಿಕೆ ಕೊಪ್ಪ ೬-೧-೯೯೧ ಭಾನುವಾರ ಬೆಲೆ ೧-೦೦ ರೂ.

ಕೊಪ್ಪ ಮಂಡಲ ಪಂಚಾಯ್ತಿ ಸಭೆಯಲ್ಲಿ

ಕಾಂಗ್ರೆಸ್ ಸಹಿತ ವಿರೋಧಿ ಸದಸ್ಯರ ಸಭಾತ್ಯಾಗ

(ವರದಿ : ಕೆ. ಎಲ್. ಶಿವಾನಂದ)

ಕೊಪ್ಪ : ಈ ತಿಂಗಳ ಕೊಪ್ಪ ಮಂಡಲ ಪಂಚಾಯ್ತಿ ಸಭೆ, ಪ್ರಧಾನರು ಸದಸ್ಯರ ಗಮನಕ್ಕೆ ಯಾವ ವಿಚಾರವನ್ನೂ ತರದೆ ಅತ್ಯಂತ ಗುರುತರವಾದ ವಿಷಯಗಳಲ್ಲಿ ಕೂಡ ತಮ್ಮ ಮನಸ್ಸಿಗೆ ಬಂದಂತೆ ವರ್ತಿಸುತ್ತಿದ್ದಾರೆಂದು ಕಾಂಗ್ರೆಸ್-ವಿರೋಧಿ ಸದಸ್ಯರೆಲ್ಲರೂ ಆಪಾದಿಸಿ ಒಟ್ಟಾಗಿ ಸಭಾತ್ಯಾಗ ಮಾಡುವಲ್ಲಿ ಪರ್ಯವಸಾನಗೊಂಡಿತು.

ಮೊದಲಿಗೆ ನೆಲ ಬಾಡಿಗೆ ದರ ಅಡಿಗೆ ೨೦ ಪೈಸೆಯಿಂದ ೧ ರೂ.ಗೆ ಏರಿಸಿದ್ದನ್ನು ಇಳಿಸಿ, ೪೦ ಪೈಸೆಗೆ ನಿಗದಿ ಮಾಡಲು ಹಾಗೂ, ಮುಸಾಫಿರ್ ಖಾನಾದಲ್ಲಿರುವ ಬಾಡಿಗೆದಾರರ ಮನವಿಯಂತೆ ಅವರಿಗೆ ಮನೆಗಳನ್ನು ತೆರವು ಮಾಡುವುದಕ್ಕೆ ಏಪ್ರಿಲ್ ವರೆಗೆ ಗಡುವು ನೀಡಲು ನಿರ್ಣಯಿಸಲಾಯಿತು.

ಅನಂತರ, ಶಕ್ತಿ ಮೆಡಿಕಲ್ಸ್‌ನ ಕೆ. ಎಸ್. ನಾಗರಾಜರಾವ್‌ಗೆ ಬಸ್‌ಸ್ಟ್ಯಾಂಡ್ ಪಕ್ಕದ ನಿವೇಶನಕ್ಕೆ ೧೪ ವರ್ಷ ಹಿಂದೆ ನಿಗದಿ ಮಾಡಿದ್ದ ದರದಲ್ಲೇ ಪುನಃ ರಸೀದಿ ಹಾಕಿದ್ದು, ಈಚಿನ ಯುವ ಮೇಳ ಕ್ರೀಡಾಪಟು ಈಶನ್‌ಗೆ ನಿವೇಶನ ನೀಡಿಕೆ, ಗ್ರಾಮ ಸಭೆ, ಹಂದಿ ಮಾಂಸದ ೨ನೇ ಅಂಗಡಿಗೆ ಪರವಾನಗಿ ನೀಡಿಕೆ- ಈ ಯಾವ ವಿಚಾರದಲ್ಲೂ ಪ್ರಧಾನರು ಸೌಜನ್ಯಕ್ಕಾದರೂ

೬ನೇ ಪುಟಕ್ಕೆ

ರಾಜ್ಯ ಖ್ಯಾತಿಯ ಕರಿಮನೆ ಭೂ ಬ್ಯಾಂಕ್ ವಿರುದ್ಧ ಆರೋಪ:

ಹರಿಜನರ ಹೆಸರಿನ ಸಾಲ ದುರುಪಯೋಗ ?

ಕೊಪ್ಪ : ರಾಜ್ಯ ಮಟ್ಟದಲ್ಲಿ ಉತ್ತಮ ಬ್ಯಾಂಕ್ ಎಂದು ಖ್ಯಾತಿ ಗಳಿಸಿರುವ ಕರಿಮನೆಯ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ, ಹರಿಜನರಿಗೆ ಎತ್ತು, ಎಮ್ಮೆಗಳಿಗೆಂದು ಸಾಲ ಮಂಜೂರು ಮಾಡಿ ಅವ್ಯವಹಾರ ನಡೆದಿರುವುದಾಗಿ ಗಂಭೀರ ಆರೋಪ ಮಾಡಲಾಗಿದೆ

ಈ ಬಗ್ಗೆ ಅತ್ತಿಕೊಡಿಗೆ ಮಂಡಲ ಪ್ರಧಾನ ಬಿ ಎಲ್ ಭಾಸ್ಕರ್ ಮತ್ತು ಉಪ ಪ್ರಧಾನ ಕೆ.ಆರ್ ದೇವೇಂದ್ರ ಅವರು ನೀಡಿರುವ ಜಂಟಿ ಪತ್ರಿಕಾ ಹೇಳಿಕೆಯಲ್ಲಿ, ಬ್ಯಾಂಕಿನ ಕಾರ್ಯದರ್ಶಿಯವರು ಈ ಅವ್ಯವಹಾರದಲ್ಲಿ ಶಾಮೀಲಾಗಿರುವುದಾಗಿ ಆರೋಪಿಸಿದ್ದಾರೆ.

ಅತ್ತಿಕೊಡಿಗೆ ಮಂಡಲ ವ್ಯಾಪ್ತಿಯ ಕೋಟೆತೋಟ ಹರಿಜನ ವಸತಿಯಲ್ಲಿರುವ ಭೈರಯ್ಯ ಬಿನ್ ತಿಮ್ಮಯ್ಯನಿಗೆ ಗಾಡಿ ಮತ್ತು ಎತ್ತುಗಳಿಗಾಗಿ ೨೮೦೦ ರೂ. ಸಾಲ ಮತ್ತು ಶೇ ೬೦ರಂತೆ ೪೨೦೦ ರೂ. ಸಹಾಯ ಧನ ಒಟ್ಟು ೭೦೦೦ ರೂ ಗಳನ್ನೂ, ಭೈರಯ್ಯ ಬಿನ್ ಚೌಡಯ್ಯ ಮತ್ತು ಮಂಜಯ್ಯ ಬಿನ್ ಚೂಡಯ್ಯ ಇವರುಗಳಿಗೆ ಎತ್ತುಗಳಿಗಾಗಿ ತಲಾ ೪೦೦೦ (೧೬೦೦+೨೪೦೦) ರೂ. ಗಳನ್ನೂ, ಮಂಜೂರು ಮಾಡಿದಂತೆ ದಾಖಲೆಗಳನ್ನು ಸೃಷ್ಟಿಸಲಾಗಿದ್ದು, ಹಣ ಸದರಿ ಫಲಾನುಭವಿಗಳಿಗೆ ಸಿಗದೆ ದುರುಪಯೋಗವಾಗಿದೆ ಎಂದು ಆರೋಪಿಸಲಾಗಿದೆ

"ಸಾಲದ ಹಣವನ್ನು ಮರು ಪಾವತಿ ಮಾಡುವಂತೆ ಹಲವು ನೋಟೀಸುಗಳನ್ನು ಕಳಿಸಿದ್ದರೂ ಕಟ್ಟದಿರುವುದರಿಂದ ಕೂಡಲೇ ಕಟ್ಟದಿದ್ದಲ್ಲಿ ಚರಾಸ್ಥಿರಾಸ್ತಿಗಳನ್ನು ಜಫ್ತಿ ಮಾಡುವುದಾಗಿ" ಈಚೆಗೆ ಈ 'ಫಲಾನುಭವಿ'ಗಳಿಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಂದ ನೋಟೀಸು ಬಂದಾಗ ಈ ಹರಿಜನರು ಬ್ಯಾಂಕಿಗೆ ಹೋಗಿ ವಿಚಾರಿಸಲಾಗಿ ತಮ್ಮಗಳ ಹೆಸರಿಗೆ ಸಾಲ ಮಂಜೂರಾಗಿ ಪಾವತಿಯಾಗಿರುವುದು ಗೊತ್ತಾಯಿತೆಂದು ಅವರುಗಳು 'ಮುಂಜಾವು'ಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಬ್ಯಾಂಕಿಗೆ ಭೇಟಿ ಕೊಟ್ಟು ಲೆಜರ್‌ಗಳನ್ನು 'ಮುಂಜಾವು' ಪರಿಶೀಲಿಸಲಾಗಿ, ದೂರಿನಲ್ಲಿರುವ ಹೆಬ್ಬೆಟ್ಟಿನ ಗುರುತುಗಳಿಗೂ, ಲೆಜರ್‌ನಲ್ಲಿರುವುದಕ್ಕೂ ಗಮನಾರ್ಹ ವ್ಯತ್ಯಾಸವಿರುವುದನ್ನು ಕಾರ್ಯದರ್ಶಿ ಡಿ ಎಲ್. ಕೇಶವಮೂರ್ತಿಯವರ ಗಮನಕ್ಕೆ ತರಲಾಯಿತು.

ಅದಕ್ಕೆ ಅವರು, ಅತ್ತಿಕೊಡಿಗೆ ಮಂಡಲ ಸದಸ್ಯ ಅಬ್ಬೂಳಮಕ್ಕಿ ಚಂದ್ರಶೇಖರ ಈ 'ಫಲಾನುಭವಿ'ಗಳನ್ನು ಕರೆ ತಂದಿದ್ದು, ಎತ್ತು-ಎಮ್ಮೆಗಳೂ ಅವರವೇ ಆಗಿದ್ದು ಅವರೇ ಹಣ ಪಡೆದವರೆಂದೂ, ಕೂಳೂರಿನ ಸದಾಶಿವ ಆಚಾರಿ ಎಂಬವರಿಗೆ ಗಾಡಿ ಬಾಬ್ತು ಹಣ ಕೊಟ್ಟಿರುವುದಾಗಿಯೂ, "ಅವರವರ ವ್ಯವಹಾರವೇನಾದರೂ ಇದ್ದರೆ ನನಗೆ ಗೊತ್ತಿಲ್ಲ" ವೆಂದೂ ತಿಳಿಸಿದರು.

ತಮಗೆ ಎತ್ತು, ಎಮ್ಮೆ, ಗಾಡಿ ಇತ್ಯಾದಿ ಯಾವುದೇ ಸವಲತ್ತನ್ನಾಗಲಿ ಹಣವನ್ನಾಗಲೀ ನೀಡಿಲ್ಲವೆಂದೂ, ಚಂದ್ರಶೇಖರ ಮತ್ತು ಕಾರ್ಯದರ್ಶಿಯವರನ್ನು ವಿಚಾರಿಸಿದಾಗೆಲ್ಲ ಇನ್ನೂ ಮಂಜೂರಾಗಿ ಬಂದಿಲ್ಲವೆಂದೂ ತಿಳಿಸುತ್ತಿದ್ದರೆಂದೂ ಈ(ವಿ)'ಫಲಾನುಭವಿ'ಗಳು 'ಮುಂಜಾವು'ಗೆ ತಿಳಿಸಿದ್ದಾರೆ.

ಈ ಪೈಕಿ ಈಗಾಗಲೇ ಮಂಜಯ್ಯ ಅವರ ಒಂದು ಎಮ್ಮೆ ಸತ್ತಿರುವಂತೆ 3500 ರೂ. ಗಳ ವಿಮಾ ಪರಿಹಾರವನ್ನು ಕೂಡ ಮಂಜೂರು ಮಾಡಿಸಿಕೊಳ್ಳಲಾಗಿದೆ (ಬಟವಾಡೆ ಇನ್ನೂ ಆಗಬೇಕಿದೆ). ಬ್ಯಾಂಕಿನಲ್ಲೇ ಹಂಗಾಮಿ ನೌಕರನಾಗಿರುವ ಕಾರ್ಯದರ್ಶಿಯ ತಮ್ಮನೇ ವಿಮಾ ಕಂಪೆನಿಯ ದಲ್ಲಾಳಿಯೂ ಆಗಿರುವುದು ಸಹ ಇಲ್ಲಿ ಗಮನಾರ್ಹ.

ಒಟ್ಟಿನಲ್ಲಿ, ತೀರಾ ಸಂಶಯಕ್ಕೆಡೆಕೊಡುವ ಅಂಶಗಳು ಈ ವ್ಯವಹಾರದಲ್ಲಿ ಮೇಲ್ನೋಟಕ್ಕೇ ಎದ್ದು ಕಾಣುತ್ತಿವೆ. ಈ ಬಗ್ಗೆ ಸಾಚಾ ತನಿಖೆಯೊಂದರಿಂದಲಷ್ಟೇ ಸತ್ಯ ಹೊರಬೀಳಬೇಕಾಗಿದೆ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಮೃತ್ಯುಂಜಯ ಅವರು ಜಿಲ್ಲಾಧಿಕಾರಿಗಳ ಆದೇಶದಂತೆ ಜ. ೩ರಂದು ಸದರಿ ಹರಿಜನರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದು, ಉಳಿದ ತನಿಖೆಯನ್ನು ಯಾವಾಗ ಕೈಗೊಳ್ಳುವರೋ— ತಿಳಿದು ಬಂದಿಲ್ಲ.

ಈ ಹಗರಣ ಈ ಘನಸ್ಥಿಕೆಯ ಬ್ಯಾಂಕಿನ ಈ ರೀತಿಯ ಸಹಾಯಧನ ಸಹಿತವಾದ ಎಲ್ಲ "ಸಾಲ"ಗಳ ಬಗ್ಗೆಯೂ ಸಂದೇಹಗಳನ್ನು ಹುಟ್ಟಿಸಿರುವುದು ಅಷ್ಟೇನೂ ಸಂತೋಷದ ಸಂಗತಿಯಲ್ಲ.

ಶಂಕರ್ ಸಾರಿಗೆ ಕಾರ್ಮಿಕ ಮುಷ್ಕರ : ಸಂಧಾನದ ಆಸೆ ಬಹು ದೂರ ?

ಕೊಪ್ಪ : ಇಲ್ಲಿನ ಶಂಕರ್ ಸಾರಿಗೆ ಸಂಸ್ಥೆಯಲ್ಲಿ ಡಿ. ೧೫ ರಿಂದ ಆರಂಭವಾಗಿರುವ ಕಾರ್ಮಿಕ ಮುಷ್ಕರ ಸಂಧಾನದ ಮೂಲಕ ಬಗೆಹರಿಯುವ ಯಾವ ಲಕ್ಷಣಗಳೂ ಕಂಡು ಬರುತ್ತಿಲ್ಲ.

ಜ. ೧ರಂದು ಬೆಂಗಳೂರಿನಲ್ಲಿ ಕಾರ್ಮಿಕ ಆಯುಕ್ತರೆದುರು ನಡೆಯಬೇಕಿದ್ದ ಸಂಧಾನ ಸಭೆ ಜ. ೧೫ಕ್ಕೆ ಮುಂದೂಡಲ್ಪಟ್ಟು ಇದೀಗ ಜ. ೮ಕ್ಕೆ ನಡೆಯಲಿದೆ ಎಂದು ಗೊತ್ತಾಗಿದೆ.

ಆದರೆ ಆದರಲ್ಲಾದರೂ ಮಾಲೀಕರು ತಮ್ಮ ಬಿಗಿ ಮುಷ್ಟಿಯನ್ನು ಸ್ವಲ್ಪವಾದರೂ ಸಡಿಲಿಸುತ್ತಾರೋ ಎಂಬ ಬಗ್ಗೆ ಈವರೆಗೆ ಯಾವ ಆಶಾದಾಯಕ ಸೂಚನೆಗಳೂ ಸಿಕ್ಕಿಲ್ಲ

ಅದರ ಬದಲು, ಸಂಸ್ಥೆಯ ೬೦ ಮಾರ್ಗಗಳ ಪರವಾನಗಿಗಳನ್ನು ಜಿಲ್ಲಾ ಸಾರಿಗೆ ಪ್ರಾಧಿಕಾರಕ್ಕೆ ಹಿಂದಿರುಗಿಸಿ 'ಸರೆಂಡರ್' ಮಾಡಿಕೊಳ್ಳಲು ವಿನಂತಿಸಿರುವುದಾಗಿ ವರದಿಯಾಗಿದೆ ಆ ಬಗ್ಗೆ ಪ್ರಾಧಿಕಾರ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲವೆನ್ನಲಾಗಿದೆ.

ಈ ಮಧ್ಯೆ ಗ್ರಾಮಾಂತರಗಳ ಜನರ ಬವಣೆ ಮುಂದುವರೆದಿದೆ. ಸುಮಾರು ೪೦ ಮಾರ್ಗಗಳಿದ್ದ ಕಡೆ, ಜಿಲ್ಲಾ ಆಡಳಿತ ಅತಿ ಪ್ರಯಾಸದಿಂದ ಒದಗಿಸಿರುವ ರಾಜ್ಯ ಸಾರಿಗೆಯ ೪೭ ಬಸ್‌ಗಳು 'ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆ' ಯಂತಾಗಿವೆ ಅವಕ್ಕೂ ಕೂಡ (ಕೆಲವು ಹೊರತು) ನಿಗದಿತ ಸಮಯವೆಂಬುದಿಲ್ಲದೆ ಇನ್ನಷ್ಟು ತೊಂದರೆಯಾಗಿದೆ. ಪರೀಕ್ಷೆಗಳು ಹತ್ತಿರ ಬರುತ್ತಿದ್ದು, ಶಾಲಾ ಮಕ್ಕಳಿಗೆ ಹಾಗೂ ಅಂಚೆ ಪ್ರಸರಣೆಗೆ ತೀವ್ರ ಅಡಚಣೆಯಾಗಿವೆ.

ಕಾರ್ಮಿಕರ ಕಾಲ್ನಡಿಗೆ ಜಾಥಾ

ಕಾರ್ಮಿಕರು ಡಿ. ೩೧ರಿಂದ ಚಿಕ್ಕಮಗಳೂರಿಗೆ ಕಾಲ್ನಡಿಗೆ ಜಾಥಾ ನಡೆಸಿದರು. ದಾರಿಯಲ್ಲಿ ವಿವಿಧ ಊರುಗಳಲ್ಲಿ ಸಭೆಗಳನ್ನೂ ನಡೆಸಿದರು. ಜ. ೨ ರಂದು ಚಿಕ್ಕಮಗಳೂರಿನಲ್ಲಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿಯೊಂದನ್ನು ಸಲ್ಲಿಸಿದರಲ್ಲದೆ, ಸಂಜೆ ಬಹಿರಂಗ ಸಭೆ ನಡೆಸಿದರು. ಕಾರ್ಮಿಕ ಮುಖಂಡರುಗಳಲ್ಲದೆ, ಜನತಾಪಕ್ಷದ ಎಂ ಪಿ. ಪದ್ಮೇಗೌಡ, ರೈತ ಸಂಘದ ವಿಶ್ವನಾಥ್, ವಕೀಲ ಬೊಮ್ಮಣ್ಣ- ಇವರುಗಳೂ ಮಾತನಾಡಿ ಕಾರ್ಮಿಕರ ಬೇಡಿಕೆ ಈಡೇರಿಕೆಗೆ ಹಾಗೂ ಆ ಮೂಲಕ ಜನರ ಬವಣೆ ನಿವಾರಿಸಲು ಒತ್ತಾಯಿಸಿದರು.

ತುಳುವಿನಕೊಪ್ಪ ಪ್ರಧಾನರಾಗಿ ಹಂಚಿಕೆಳಲು ಪ್ರಕಾಶ್

ಕೊಪ್ಪ : ತುಳುವಿನಕೊಪ್ಪ ಮಂಡಲ ಪ್ರಧಾನರಾಗಿ ಎಚ್ ಎಸ್. ಜಯಪ್ರಕಾಶ್ ಮತ್ತು ಉಪ ಪ್ರಧಾನರಾಗಿ ಮುತ್ತಮ್ಮ ಡಿ. ೨೮ರಂದು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬೇರೆ ಯಾವ ನಾಮಪತ್ರವೂ ಇರಲಿಲ್ಲ ಮುತ್ತಮ್ಮ ಇದೇ ಹುದ್ದೆಯಿಂದ ಈಚೆಗಷ್ಟೇ ಪದಚ್ಯುತರಾಗಿದ್ದರು

ಇದೇ ದಿನ ಕಾಂಗ್ರೆಸ್‌ನ ಮಂಡಲ ಸದಸ್ಯ ಎಲ್ ಟಿ. ಪುಟ್ಟಪ್ಪಗೌಡ ಅವರು "ವೈಯಕ್ತಿಕ ಕಾರಣ" ನೀಡಿ ಮಂಡಲ ಸದಸ್ಯತ್ವಕ್ಕೆ ಹಾಗೂ ಕಾಂಗ್ರೆಸ್ ಪಕ್ಷದ ಸದಸ್ಯತ್ವಕ್ಕೆ ಕೂಡ ರಾಜೀನಾಮೆ ಸಲ್ಲಿಸಿದ್ದಾರೆ ಇದು ಈ 'ಅವಿರೋಧ ಆಯ್ಕೆ'ಯ ಹಿನ್ನೆಲೆಗೆ ಕನ್ನಡಿಯಾಗಿರಬಹುದು.

ಅಬ್ದುಲ್ ಹಮೀದ್ ನಿಧನ

ಕೊಪ್ಪ : ಇಲ್ಲಿನ ಪ್ರಮುಖ ವ್ಯಾಪಾರಿಗಳಲ್ಲೊಬ್ಬರಾಗಿದ್ದ ಅಬ್ದುಲ್ ಹಮೀದ್ ರವರು ಜ. ೪ರ ರಾತ್ರಿ ಬೆಂಗಳೂರಿನಲ್ಲಿ ಹೃದಯಾಘಾತದಿಂದ ಅಕಾಲ ಮರಣಕ್ಕೀಡಾದರು. ಅವರಿಗೆ ಕೇವಲ ೫೨ ವರ್ಷ ವಯಸ್ಸಾಗಿತ್ತು.

'ಮಾವಿನಕಟ್ಟೆ ಅಂಗಡಿ' ಎಂದು ಜನಪ್ರಿಯವಾಗಿದ್ದ ತಮ್ಮ ಅಂಗಡಿಯ ಮೂಲಕ ಸುತ್ತಮುತ್ತಲ ನೂರಾರು ಜನರೊಂದಿಗೆ, ಮುಖ್ಯವಾಗಿ ರೈತರೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದ ಹಮೀದ್‌ರವರು ಪತ್ನಿ ಹಾಗೂ ನಾಲ್ವರು ಗಂಡು ಮತ್ತು ನಾಲ್ವರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

ಸದ್ಯದಲ್ಲೇ ನಡೆಯಲಿದ್ದ ತಮ್ಮಿಬ್ಬರು ಗಂಡು ಮಕ್ಕಳ ಮದುವೆಗಾಗಿ ಜವಳಿ, ಒಡವೆ ತರುವುದಕ್ಕಾಗಿ ಅವರು ತನ್ನ ತಮ್ಮ ಇಕ್ಬಾಲ್‌ರೊಂದಿಗೆ ಬೆಂಗಳೂರಿಗೆ ತೆರಳಿದ್ದರೆನ್ನಲಾಗಿದೆ.

ಗ್ರಾಹಕರ ವ್ಯಾಜ್ಯ ಪರಿಹಾರ ಆಯೋಗ

(ಅಥವಾ ಗ್ರಾಹಕರ ವಿವಾದ ಮತ್ತು ಸಮಸ್ಯೆ ನಿವಾರಣಾ ವೇದಿಕೆ)

ವಿವಿಧ ವಸ್ತುಗಳ ತಯಾರಕರು, ವ್ಯಾಪಾರಿಗಳು, ಏಜೆಂಟರು, ವಿದ್ಯುತ್, ಟೆಲಿಫೋನ್ ಮುಂತಾದ ಸೇವಾ ಇಲಾಖೆಗಳು ಹಾಗೂ ಸರ್ಕಾರದ ವಿವಿಧ ಇಲಾಖೆಗಳು ಮುಂತಾದವರುಗಳಿಂದ ಜನಸಾಮಾನ್ಯರು ತಾವು ತೆತ್ತ ಹಣಕ್ಕೆ ತಕ್ಕ ವಸ್ತು ಅಥವಾ ತಮ್ಮ ಹಕ್ಕಿನ ಸೇವೆ ಪಡೆಯುವಾಗ ಹಲವು ವಿವಾದಗಳು ಉದ್ಭವಿಸಬಹುದು.

ಇಂಥ ವಿವಾದಗಳಲ್ಲಿ ಗ್ರಾಹಕರಿಗೆ ನ್ಯಾಯ ಒದಗಿಸುವ ಸಲುವಾಗಿ ಕೇಂದ್ರ ಸರ್ಕಾರ ರೂಪಿಸಿರುವ 1986ರ ಗ್ರಾಹಕ ಹಿತ ರಕ್ಷಣಾ ಕಾಯಿದೆಯ ಅನ್ವಯ ಗ್ರಾಹಕರ ವ್ಯಾಜ್ಯ ಪರಿಹಾರ ಆಯೋಗಗಳನ್ನು ರಚಿಸಲಾಗಿದೆ. ಇವು ಈಗ ವಿಭಾಗ ಮತ್ತು ರಾಜ್ಯ-ಕೇಂದ್ರ ಮಟ್ಟಗಳಲ್ಲಿದ್ದು, ಪ್ರತಿ ಜಿಲ್ಲೆಗೊಂದು ವೇದಿಕೆ ರಚಿಸಬೇಕೆಂದು ಕಾಯಿದೆ ಹೇಳುತ್ತದೆ.

ಈ ಆಯೋಗ ಅಥವಾ ವೇದಿಕೆಗಳು ನ್ಯಾಯಾಲಯಗಳಂತೆ ಕೆಲಸ ಮಾಡುತ್ತವೆ. ಆದರೆ ಇಲ್ಲಿ ಕೋರ್ಟ್ ಶುಲ್ಕವಿಲ್ಲ ಗ್ರಾಹಕ ವಿವಾದಗಳು ಮಾತ್ರವಾದ್ದರಿಂದ ವಿಳಂಬವೂ ಆಗುವುದಿಲ್ಲ. ಸದ್ಯ ಚಿಕ್ಕಮಗಳೂರು, ಹಾಸನ, ಕೊಡಗು, ದ. ಕನ್ನಡ ಮೈಸೂರು, ಮಂಡ್ಯ ಜಿಲ್ಲೆಗಳನ್ನೊಳಗೊಂಡ ಮೈಸೂರು ವಿಭಾಗ ವೇದಿಕೆಗೆ ನ್ಯಾಯಾಧೀಶ ಕೆ. ಬಿ. ವೈದ್ಯ ಅಧ್ಯಕ್ಷ (ನ್ಯಾಯಾಧೀಶ)ರಾಗಿದ್ದಾರೆ.

ಗ್ರಾಹಕರು ಕೊಂಡ ಪದಾರ್ಥಗಳು ಕಲಬೆರಕೆಯಾಗಿದ್ದರೆ, ವಾಯಿದೆ ಮೀರಿದ ಔಷಧ ಮಾರಿದ್ದರೆ, ಕೊಂಡ ವಸ್ತು ಗ್ಯಾರಂಟಿ ಅವಧಿಯೊಳಗೆ ಹಾಳಾದರೆ, ವಾಹನಕ್ಕೆ ಬುಕ್ಕಿಂಗ್ ಮಾಡಿದ ಠೇವಣಿ ಹಣ ವಾಪಸು ನೀಡಲು ನಿರಾಕರಿಸಿದರೆ, ಷೇರು ಹಣ ಅಥವಾ ಷೇರಿಗಾಗಿ ಸಲ್ಲಿಸಿದ ಠೇವಣಿಯ ಬಗ್ಗೆ ವಿವಾದವಿದ್ದರೆ—ಇವೇ ಮುಂತಾದ ಎಲ್ಲ ರೀತಿಯ ಗ್ರಾಹಕ ವಿವಾದಗಳಲ್ಲೂ ವೇದಿಕೆಗೆ ದೂರು ಸಲ್ಲಿಸಬಹುದು.

ದೂರಿನೊಂದಿಗೆ ವಸ್ತುವನ್ನು ಕೊಂಡ ರಸೀದಿಗಳನ್ನು ಅಥವಾ ದೂರನ್ನು ರುಜುವಾತುಪಡಿಸುವ ಇನ್ನಿತರ ಸಮರ್ಪಕ ದಾಖಲಾತಿಗಳನ್ನು ಲಗತ್ತಿಸಬೇಕು.

ಸೇವಾ ಕ್ಷೇತ್ರದ ಸಮಸ್ಯೆಗಳಾದ ವಿದ್ಯುತ್/ದೂರವಾಣಿ ಶುಲ್ಕದ ವಿವಾದ, ಮುನ್ಸೂಚನೆ ನೀಡದೆ ವಿದ್ಯುತ್ ಮತ್ತು ದೂರವಾಣಿ ಸೌಕರ್ಯ ನಿಲ್ಲಿಸುವುದು, ಕಳಪೆ ವಿದ್ಯುತ್ ಉಪಕರಣದಿಂದಾಗುವ ಬೆಂಕಿ ಅನಾಹುತದ ಬಗ್ಗೆ ಗುತ್ತಿಗೆದಾರರನ್ನು

(೩ನೇ ಪುಟಕ್ಕೆ)

ಹಾಸ್ಯ ಧಡಾಕಿಗಳು

● ಸಂಗ್ರಹ :

○ ಎಚ್ ವಿ ನರಸಿಂಹ ಮೂರ್ತಿ

ಊಟ ಮಾಡಿ ಕೈ ತೊಳೆಯುತ್ತಿದ್ದ ಒಬ್ಬ ರಾಜನ ಬೆನ್ನ ಮೇಲೆ ವಿದೂಷಕ ಕೈಹಾಕಿದ. ಕೋಪಗೊಂಡ ರಾಜ. ವಿದೂಷಕನಿಗೆ:- "ನನ್ನ ಬೆನ್ನ ಮೇಲೆ ಕೈ ಹಾಕುವಷ್ಟು ಕೊಬ್ಬೆ ನಿನಗೆ? ನಿನಗೆ ಮರಣ ದಂಡನೆ ವಿಧಿಸಿದ್ದೇನೆ ಆದರೆ ಒಂದು ಷರತ್ತು ನನಗೆ ಈಗಲೇ ಕೋಪ ಬಂದಿದೆ, ಇನ್ನೂ ಕೋಪ ಬರುವಂತೆ ಮಾಡಿದರೆ ನಿನ್ನನ್ನು ಕ್ಷಮಿಸುತ್ತೇನೆ".

ವಿದೂಷಕ : ಮಹಾ ಪ್ರಭುಗಳು ಮನ್ನಿಸಬೇಕು ನನಗೆ ಅರಿವಿಲ್ಲದೆ ಮಾಡಿದ ತಪ್ಪಿದು. ನಾನು ಮಹಾರಾಣಿಯವರ ಬೆನ್ನು ಎಂದು ತಪ್ಪಾಗಿ ತಿಳಿದೆ

○ ಮನೆಗೆ ಬಂದ ಯಜಮಾನರು ಹೆಂಡತಿಯನ್ನು ಕೂಗಿ:- ಅಲ್ವೇ, ಹುಚ್ಚು ನಾಯಿ ಕಾಟ ಜಾಸ್ತಿಯಾಗಿದೆಯಂತೆ. ಮುನ್ಸಿಪಾಲಿಟಿಯವರು ಬೀದಿ ನಾಯಿಗಳನ್ನೆಲ್ಲ ಹಿಡಕೊಂಡು ಹೋಗ್ತಿದಾರಂತೆ ಕಣೆ.


ಹೆಂಡತಿ:- (ಅಡಿಗೆ ಮನೆಯಿಂದಲೇ) ಅದಕ್ಕೇ ಅಲ್ವೇನ್ರಿ ನಾನು ಹೇಳಿದ್ದು.-ಬೀದಿ ಬೀದಿ ಅಲೀಬೇಡಿ ಅಂತ....

ಪದ್ಯದಂಗಳ

ಕನಸಿನ ಆ ನಾಡು !

ಹಾತೊರೆದಿದೆ ಎದೆ ಎಂದಿಗೆ, ಬರುವುದೊ
ಕನಸಿನ ಆ ನಾಡು.
ಬಳಲಿದ ಬಗೆಗಳ ನಿಡಿದುಸಿರೊರೆಸುವ
ಮಮತೆಯ ಆ ನಾಡು
ತರನನ ತರನನ ತುಂಬಿನ ಸೋನೆ
ಬೆಳಕಿನ ಆ ಹಾಡು
ಮನಸಿನ ಗೋಡೆಗೆ ಬಿರುಕುಗಳೆದ್ದಿವೆ
ಮಾಯದ ಮೌನದ ಗಾಯಗಳೊಡೆದಿವೆ
ದುಗುಡವೆ ಎದೆಯನು ಮುಕ್ಕುತಲಿರುವುದೆ
ಕತ್ತಲು ಹಡೆದಿಹ ಶನಿ ಸಂತಾನವೆ
ಜನರುದ್ಧಾರದ ಸೋಗಿನಲಿ
ಬಡಕಲು ಎದೆಗೂಡುಗಳನೆ ಹಿಂಡಿ
ನೆತ್ತರ ಧಾರೆ ಸೆಕ್ಕುತಿವೆ
ಭಾರತಿ ದೇವಿಯ ಎದೆಗಳುಲಕ್ಕಿದೆ ಕಣ್ಣೀರು
ಮುದುಡಿದ ಹೂಗಳ ಪಕಳೆಗಳರಳಲಿ
ಕದಡಿದ ಕೊಳಗಳ ಕೊಳೆಯದು ಇಂಗಲಿ
ನಗು ನಲಿಯುವ ಮೊಗ
ಒಲುಮೆಯನುಲಿಯಲಿ
ಬಾಗಿದ ತಲೆಗಳು ಬಿಗಿದು ನಿಲ್ಲಲಿ
ಕಸುವು ಕಾಲುಗಳ ಕೂಡಲಿ
ಭೀತಿಯೆ ಇಲ್ಲದ ಬೆಂಕಿ ಮಕ್ಕಳು
ಬರಲಿ ಬೆಳಕನು ಕಕ್ಕುತಲಿ
ಬರುವುದೊ ಎಂದಿಗೆ ಸ್ವಪ್ನದೆ ನೇಯ್ದ
ಆ ನಾಡು

—ಗುರುರಾಜ ತಂತ್ರಿ ಪಣೆಯೂರು



ಚಂದಮಾಮ

ಓ ಚಂದಮಾಮ
ನಿನ್ನ ಅಂದ ಬಲು ಚಂದ
ನಾನು ನಿನ್ನ ಕಾಯುವೆ
ಬೆಳಗಿನಿಂದ ಸಂಜೆಯವರೆಗೆ
ಆದರೆ ಒಂದು ವೇಳೆ ಮೋಡ
ಮುಸುಕಿದರೆ ಏನು ಮಾಡುವುದು ?

ಚಿನ್ನದ ಗುಬ್ಬಿ

ಗುಬ್ಬಿ ಗುಬ್ಬಿ ಚಿನ್ನದ ಗುಬ್ಬಿ
ನನ್ನ ಜೊಟ್ಟಿಗೆ ಆಡಲು ಬಾ
ಹಾಲನು ಕುಡಿದು
ಕಾಳನು ತಿಂದು
ಸುಖವಾಗಿರು ಬಾ.

—ಬಿ ವೇಣು, ೫ನೇ ತರಗತಿ

ನಮ್ಮ ಬೆಕ್ಕು

ನಮ್ಮ ಮನೆಯ ಬೆಕ್ಕು
ಅದಕೆ ಬಹಳ ಸೊಕ್ಕು
ಹಾಲು ಮೊಸರು ಬೇಡುವುದು
ಇಲಿಯ ತಾನು ಹಿಡಿಯದು
ಹಿಡಿಕ ತರಲು ಜಾಗ
ಖಾಲಿ ಮಾಡುವುದು !

—ಮಲ್ಲಿಗೆ ಸಿರಿಮನೆ,
೩ನೇ ತರಗತಿ.

ಕಷ್ಟ ಪಟ್ಟರೇ ಫಲ

ಒಂದೂರಿನಲ್ಲಿ ರಾಜು ಎಂಬ ಬಡ ಹುಡುಗನಿದ್ದನು. ಅವನ ತಂದೆ ಕೂಲಿ ಕೆಲಸ ಮಾಡಿ, ಬಂದ ಅಲ್ಪ ಸ್ವಲ್ಪ ಹಣವನ್ನೂ ಕುಡಿದು, ಬೀಡಿ ಸೇದಿ ಹಾಳು ಮಾಡುತ್ತಿದ್ದನು. ಆದರೆ ಅವನ ತಾಯಿ ಮಾತ್ರ ತಾನು ಕಷ್ಟಪಟ್ಟು ದುಡಿದರೂ ರಾಜುವನ್ನು ಮಾತ್ರ ಶಾಲೆಗೆ ಸೇರಿಸಿದ್ದಳು. ಅವನೂ ತಮ್ಮಂತಾಗದೆ, ಉತ್ತಮ ಜೀವನ ನಡೆಸುವಂತಾಗಬೇಕೆಂದು ಅವಳ ಆಸೆ.

ಅವಳ ಆಸೆಗೆ ತಕ್ಕಂತೆ ರಾಜು ಕರುಣೆಯೂ ಜಾಣನೂ ಆಗಿದ್ದನು. ಅವನೀಗ ೭ನೇ ತರಗತಿ. ರಾಮಪ್ಪನ ಧಣಿಯ ಮಗ ಗೋಪುವೂ ರಾಜುವಿನ ಸಹಪಾಠಿ. ಆದರೆ ಅವನು ದಡ್ಡ ಮಾತ್ರವಲ್ಲ, ನಿಷ್ಕರುಣಿಯೂ ಅಹಂಕಾರಿಯೂ ಆಗಿದ್ದನು. ಅವನಿಗೆ ತಮ್ಮ ಮನೆಯ ಕುಡುಕ ಆಳಿನ ಮಗ ರಾಜು ತನಗಿಂತ ಜಾಣನಾಗಿರುವುದು ಸಹಿಸದು. ಆದಕ್ಕಾಗಿ ರಾಜುವಿಗೆ ಕಿರುಕುಳ ಕೊಡುವನು ಅವನೂ ತನ್ನ ಗುಂಪಿನ ಇತರರ ಹಾಗೇ ಪೋಲಿ ಬಿದ್ದು ಹಾಳಾಗಲೆಂದು ಅವನ ಅಪೇಕ್ಷೆ.

ಪರೀಕ್ಷೆಯ ದಿನ ಕೂಡ ಗೋಪು ರಾಜುವಿನ ಒಂದು ಪೆನ್ನನ್ನು ಹಾರಿಸಿದ. ರಾಜು ಅಳುತ್ತ ಕುಳಿತಾಗ ಉಪಾಧ್ಯಾಯರೇ ತಮ್ಮ ಪೆನ್ನು ಕೊಟ್ಟರು. ಅಂತೂ ರಾಜು ಉತ್ತಮ ಅಂಕ ಪಡೆದು ಪಾಸಾದ. ಗೋಪು ಫೇಲಾಗಿದ್ದ.

ರಾಜು ಪ್ರೌಢ ಶಾಲೆಗೆ ಸೇರುವ ದಿನ ಬಂತು. ಅವನ ತಾಯಿಯ ಧಣಿಗಳು ಊರಲ್ಲಿರಲಿಲ್ಲ. ಆದ್ದರಿಂದ ಗಂಡನಿಗೆ, ಅವನ ಅವನ ಧಣಿಯಿಂದ ೩೦೦ ರೂಪಾಯಿ ಕೇಳಿಕೊಂಡು ಬರಲು ಹೇಳಿದಳು.

ಗೋಪುವಿನ ತಂದೆ ರಾಮಪ್ಪನಿಗೆ ಹೇಳಿದ—ರಾಮಪ್ಪ, ಮಗನನ್ನು ಯಾತಕ್ಕೆ ಶಾಲೆಗೆ ಕಳುಸುತ್ತೀ ? ಅದರ ಬದಲು ಅವನು ನಿನ್ನ ಜೊತೆಗೆ ದುಡಿದರೆ ನಿನಗೂ ಸಹಾಯವಾಗುವುದಿಲ್ಲವೆ?

ಹೀಗೆಂದು ಅವನಿಗೆ ಸ್ವಲ್ಪ ಕುಡಿಯಲು ಕೊಟ್ಟ-ಹಣ ಕೊಡಲಿಲ್ಲ. ರಾಮಪ್ಪ ಕುಡಿದು ಮನೆಗೆ ಬಂದ. ಹೆಂಡತಿಯು ಮಗನ ಫೀಜಿಗಾಗಿ ಹಣ ಕೇಳಿದಾಗ ಜಗಳಾಡಿ ಹೊಡೆದು, ಮಲಗಿ ನಿದ್ದೆ ಹೋದ.

ಹೀಗೇ ಆದರೆ ಮಗನ ಬಾಳು ಹಾಳಾಗುವುದೆಂದು ಅರಿತ ರಾಜುವಿನ ತಾಯಿ ಆ ರಾತ್ರಿಯೇ ಮಗನೊಂದಿಗೆ ಮನೆ ಬಿಟ್ಟು ಹೊರಟಳು. ಅಂದು ಹುಣ್ಣಿಮೆ. ಜಗವೆಲ್ಲ ಮಲಗಿರಲು ಇವರಿಬ್ಬರೇ ನಡೆದಿದ್ದರು. ಹುಣ್ಣಿಮೆ ಚಂದ್ರನೇ ಅವರಿಗೆ ದಾರಿ ದೀಪವಾಗಿದ್ದ.

ನಡೆದೂ ನಡೆದೂ ಬೆಳಗಾಗುವ ಹೊತ್ತಿಗೆ ಪಟ್ಟಣಕ್ಕೆ ತಲುಪಿದರು. ಪಟ್ಟಣದ ಹೊರ ವಲಯದಲ್ಲಿರುವ ಬಡವರ ಮನೆಯೊಂದಕ್ಕೆ ಹೋಗಿ, ತಾವು ಬಂದ ವಿಚಾರವನ್ನು ಅವರಿಗೆ ರಾಜುವಿನ ತಾಯಿ ತಿಳಿಸಿದಳು. ಯಾರಾದರೊಬ್ಬ ಶ್ರೀಮಂತರ ಮನೆಯಲ್ಲಿ ಕೆಲಸ ಹುಡುಕಿಕೊಡಬೇಕೆಂದು ಅವರನ್ನು ಕೇಳಿದಳು.

(ಮುಂದಿನ ವಾರಕ್ಕೆ)

ಬೆಳಗು

ಚಿಲಿಪಿಲಿಗುಟ್ಟುತ್ತಿಹುದು ಹಕ್ಕಿ
ತಂಪಾಗಿ ಬೀಸುತ್ತಿಹುದು ಗಾಳಿ
ಏಳುತ್ತಿಹುದು ಸೂರ್ಯ
ನಿಃಶಬ್ದನಾಗಿ
ಮರೆಯಾಗುತ್ತಿಹನು ಚಂದ್ರ
ನಿಧಾನವಾಗಿ
ಓಡುತ್ತಿಹುದು ಕತ್ತಲೆ
ಹರಡುತ್ತಿಹುದು ಬೆಳಕು
ಧೈರ್ಯವಾಗಿರು—
ಮಾನವ, ಧೈರ್ಯವಾಗಿರು

—ಎಂ. ಎ. ಅಲಂಪು,
೫ನೇ ತರಗತಿ, ಶಿವಮೊಗ್ಗ.

ಪುಟ್ಟ ಕಾರ್ತಿಕನಿಗೆ ನಟನೆಯ ಬಹುಮಾನ

ಜಯಪುರ : ಬಿಳಾಲುಕೊಪ್ಪ ಮೇರುತಿ ಜೇಸೀಸ್ ಆಶ್ರಯದಲ್ಲಿ ನಡೆದ ಹಾಸ್ಯ ನಾಟಕ ಸ್ಪರ್ಧೆಯಲ್ಲಿ ಇಲ್ಲಿಗೆ ಸಮೀಪದ ಹೇರೂರು-ದೂಬಳದ 'ಹವಿಸಂ' ಬಳಗದ ೬ ವರ್ಷದ ಬಾಲಕ ಎಚ್. ಎಸ್ ಕಾರ್ತಿಕ ಪ್ರೋತ್ಸಾಹಕ ಬಹುಮಾನವನ್ನು ಪಡೆದಿದ್ದಾನೆ.

ಈತ ಅಲ್ಲಿನ ವೀರಗಲ್ಲುಮಕ್ಕಿ ಕಿರಿಯ ಪ್ರಾಥಮಿಕ ಪಾಠಶಾಲೆಯ ಒಂದನೇ ತರಗತಿಯ ವಿದ್ಯಾರ್ಥಿ. ಈಗಲೇ ಈತ ತನ್ನದೇ ಆದ ತೊದಲು ಭಾಷೆಯಲ್ಲಿ 'ಕವನ'ಗಳನ್ನು ರಚಿಸುವ ಹವ್ಯಾಸಿ ಕೂಡ.

ಗಂಧ, ದಂತ, ಬೀಟೆ ಇತ್ಯಾದಿ ಕಳ್ಳಸಾಗಣೆದಾರರ ಜಾಮೀನು ರಹಿತ ಬಂಧನ ಕ್ರಮ ಬದ್ಧ : ಹೈಕೋರ್ಟ್ ತೀರ್ಪು

ಕೊಪ್ಪ : ಅರಣ್ಯ ಸಂರಕ್ಷಣಾ ಕಾಯ್ದೆಯ ೧೬೪ ನೇ ಕಲಮಿನಂತೆ ಗಂಧ, ದಂತ, ಬೀಟೆ, ಮತ್ತಿತರ ಅಮೂಲ್ಯ ಅರಣ್ಯ ಸಂಪತ್ತನ್ನು ಕಳ್ಳಸಾಗಣೆ ಮಾಡುವವರಿಗೆ ಜಾಮೀನು ರಹಿತ ಬಂಧನ ವಿಧಿಸಬೇಕೆಂಬುದನ್ನು ವಜಾಗೊಳಿಸುವಂತೆ ಕೋರಿ ಹೈ ಕೋರ್ಟಿಗೆ ಸಲ್ಲಿಸಿದ್ದ ರಿಟ್ ಅರ್ಜಿಯ (೩೧೯೩/೮೩) ವಿಚಾರಣೆ ನಡೆಸಿದ ನ್ಯಾ| ಎಚ್. ಜಿ ಬಾಲಕೃಷ್ಣರವರು ಸದರಿ ಕಲಮಿನ ಸಿಂಧುತ್ವವನ್ನು ಎತ್ತಿಹಿಡಿದಿದ್ದಾರೆ.

ಈ ಅರ್ಜಿಯ ಮೇರೆಗೆ ಸದರಿ ಕಲಮಿನ ಜಾರಿಗೆ ನೀಡಲಾಗಿದ್ದ ತಡೆಯಾಜ್ಞೆಯನ್ನವರು ತೆಗೆದು ಹಾಕಿದ್ದಾರೆ. ಈ ತಡೆಯಾಜ್ಞೆಯಿಂದಾಗಿ, ಗಂಧ, ಬೀಟೆ ಮುಂತಾದುವುಗಳ ಕಳ್ಳ ಸಾಗಣೆದಾರರು ನಿಮಿಷಾರ್ಧದಲ್ಲಿ ಜಾಮೀನು ಪಡೆದು ಮತ್ತೆ ಮತ್ತೆ ಅದೇ ಧಂಧೆಯಲ್ಲಿ ರಾಜಾರೋಷವಾಗಿ ತೊಡಗುತ್ತಿದ್ದುದು ಜನ ಜನಿತ.

ಖಾಸಗಿ ವ್ಯಕ್ತಿಯೊಬ್ಬನ ಹೆಸರಿನಲ್ಲಿ ಅರಣ್ಯ ಕಳ್ಳಸಾಗಣೆದಾರರ ಪ್ರಬಲವಾದ ಲಾಬಿಯು ಹೂಡಿದ್ದ ಈ ಪ್ರಕರಣವನ್ನು ವಜಾ ಮಾಡಿದ ನ್ಯಾಯಾಧೀಶರು, ಈ ವಿಧೇಯಕವು ಸಂವಿಧಾನದ ೨೧ ಮತ್ತು ೨೨ ನೇ ವಿಧಿಗಳಿಗೆ ಅನುಗುಣವಾಗಿದ್ದು, ಅಂತಹ ಅಪರಾಧಿತನಿಗೆ ಪ್ರಾಸಿಕ್ಯೂಶನ್ ಇಚ್ಛಿಸಿದಲ್ಲಿ ಮಾತ್ರ ನ್ಯಾಯಾಲಯಕ್ಕೆ ಮನವರಿಕೆ ಮಾಡಿ ಜಾಮೀನು ಪಡೆಯಲು ಸಾಧ್ಯವೆಂದಿದ್ದಾರೆ.

ವಿಪರ್ಯಾಸವೆಂದರೆ, ಈ ತೀರ್ಪು ಕಳೆದ ಆಗಸ್ಟ್ ತಿಂಗಳಲ್ಲೇ ಬಂದಿದ್ದರೂ ಅರಣ್ಯ ಇಲಾಖೆ ಅದರ ಪ್ರತಿಗಳನ್ನು ಇನ್ನೂ ಪಡೆದುಕೊಂಡು ಕಾರ್ಯರೂಪಕ್ಕೆ ತಂದಿಲ್ಲವೆನ್ನಲಾಗಿದೆ. ಇಲ್ಲೂ ಕಳ್ಳಸಾಗಣೆ ಲಾಬಿಯ ಕೈವಾಡವೋ !

ಫೆಬ್ರವರಿಯಲ್ಲಿ ಕೊಪ್ಪದಲ್ಲಿ ಒಂದು ಕವಿಗೋಷ್ಠಿ

ಫೆಬ್ರವರಿ ತಿಂಗಳಿನಲ್ಲಿ ಕೊಪ್ಪದಲ್ಲಿ ನಡೆಯಲಿರುವ ಕವಿಗೋಷ್ಠಿಯಲ್ಲಿ ಭಾಗವಹಿಸಲು ಇಚ್ಛಿಸುವ ಕವಿ/ಕವಯಿತ್ರಿಯರು ತಮ್ಮ ಎರಡು ಕವನಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳಿಸಿ ಹೆಸರನ್ನು ನೋಂದಾಯಿಸಬೇಕಾಗಿ ಕೋರಿಕೆ. ಯಾವುದೇ ಪ್ರವೇಶ ಶುಲ್ಕ ಇರುವುದಿಲ್ಲ. ವಿಳಾಸ : ಸಂಚಾಲಕರು, ಹು ವಾ. ಪ್ರಕಾಶನ, ಹೇರೂರು— ೫೭೭ ೧೧೮ ಕೊಪ್ಪ ತಾಲ್ಲೂಕು

'ಹವಿಸಂ' ನಾಟಕಕ್ಕೆ ಮೊದಲ ಬಹುಮಾನ

ಬಿಳಾಲುಕೊಪ್ಪ ನೇರುತಿ ಜೇಸೀಸ್ ಆಶ್ರಯದಲ್ಲಿ ನಡೆದ ಜಿಲ್ಲಾ ಮಟ್ಟದ ಹಾಸ್ಯ ನಾಟಕ ಸ್ಪರ್ಧೆಯಲ್ಲಿ ಹೇರೂರಿನ 'ಹವಿಸಂ' ಬಳಗದವರು ತಮ್ಮ "ದೇವ ಬಂದಾ ನಮ್ಮ ಸ್ವಾಮಿ ಬಂದಾ" ನಾಟಕಕ್ಕೆ (ರಚನೆ: ಕುಲಕರ್ಣಿ, ಗದಗ) ಮೊದಲ ಬಹುಮಾನ ಪಡೆದಿದ್ದಾರೆ.

ಬಿಳಾಲುಕೊಪ್ಪದವರು 'ಕಲೆಯ ಕೊಲೆ' ನಾಟಕಕ್ಕೆ ಎರಡನೇ ಬಹುಮಾನ ಹಾಗೂ 'ಬೊಮ್ಮಲಾಪುರ ಯುವಕ ಸಂಘದವರು ಮೂರನೇ ಬಹುಮಾನ ಪಡೆದಿದ್ದಾರೆ

ಹರಿಹರಪುರದಲ್ಲೊಂದು ಯಶಸ್ವೀ ಖೋ-ಖೋ ತರಬೇತಿ ಶಿಬಿರ

ರಾಜ್ಯ. ರಾಷ್ಟ್ರ ಮಟ್ಟದ ಎಷ್ಟೋ ಕ್ರೀಡಾ ಶಿಬಿರಗಳು ಅವ್ಯವಸ್ಥೆಯ ಆಗರವಾಗಿರುವುದನ್ನು ಕೇಳಿದ್ದೇವೆ, ಓದಿದ್ದೇವೆ. ಆದರೆ ಮಲೆನಾಡಿನ ಮೂಲೆಯ ಹರಿಹರಪುರದ ಅ. ರಾ. ಸ. ಪದವಿ ಪೂರ್ವ ಕಾಲೇಜಿನಲ್ಲಿ ಡಿ. ೨೨ ರಿಂದ ೨೬ ರವರೆಗೆ ನಡೆದ ಜಿಲ್ಲಾ ಮಟ್ಟದ ಖೋ-ಖೋ ತರಬೇತಿ ಶಿಬಿರ ಅತ್ಯಂತ ಅಚ್ಚುಕಟ್ಟಾಗಿ, ಆತ್ಮೀಯತೆಯಿಂದ ಮತ್ತು ಶಿಸ್ತಿನಿಂದ ನಡೆದು ಶಿಬಿರದಲ್ಲಿ ಭಾಗವಹಿಸಿದ್ದ ೬೬ ಜನ ಪ್ರೌಢಶಾಲಾ ಮತ್ತು ಪ್ರಾಥಮಿಕ ಶಾಲಾ ಬಾಲಕ-ಬಾಲಕಿಯರು ಹರಿಹರಪುರದ ಸವಿ ನೆನಪನ್ನು ಹೊತ್ತು ರಾಜ್ಯ ಮಟ್ಟದ ಸ್ಪರ್ಧೆಗೆ ತೆರಳಿದ್ದಾರೆ.

ವಿನೂತನ ಅನುಭವ

ಚಿಕ್ಕಮಗಳೂರು ಜಿಲ್ಲೆಯ ವಿವಿಧ ತಾಲ್ಲೂಕು-ಹಳ್ಳಿಗಳಿಂದ ಬಂದಿದ್ದ ಈ ಬಾಲಕ-ಬಾಲಕಿಯರಿಗೆ ಇಲ್ಲಿದ್ದಷ್ಟು ದಿನವೂ ಉತ್ತಮ ತರಬೇತಿಯ ಜೊತೆಗೆ ಕ್ರೀಡಾಂಗಣದಲ್ಲಿ ಬೆಳಿಗ್ಗೆ ಮುಂಚೆ ಕಾಫಿ-ಬಿಸ್ಕತ್ ಹಾಗೂ ಸಂಜೆ ಕಾಫಿ-ತಿಂಡಿ ಒದಗಿಸಿದರೆ ಊರಿನ ಸುಮಾರು ನಲವತ್ತು ಕುಟುಂಬಗಳು ತರಬೇತಿಗೆ ಬಂದ ಬಾಲಕ-ಬಾಲಕಿಯರನ್ನು ಊಟ, ತಿಂಡಿಗಾಗಿ ತಮ್ಮ ಕುಟುಂಬದ ಸದಸ್ಯರನ್ನಾಗಿ ಸೇರಿಸಿಕೊಂಡು ಆತ್ಮೀಯತೆಯ ಸಿಂಚನಗೈದರು. ಎಷ್ಟೋ ಕುಟುಂಬಗಳು ತರಬೇತಿ ಮುಗಿಸಿ ಬೀಳ್ಕೊಂಡ ಬಾಲ-ಬಾಲೆಯರಿಗೆ ಸಿಹಿಯೂಟ ಮಾಡಿಸಿ ಕಳುಹಿಸಿದರು! ಮಕ್ಕಳನ್ನು ತಮ್ಮ ಮನೆಯ ಅತಿಥಿಗಳನ್ನಾಗಿಸಿಕೊಳ್ಳುವಲ್ಲಿ ಪೈಪೋಟಿಯೇ ನಡೆದದ್ದು ಊರವರ ಕ್ರೀಡಾ ಪ್ರೇಮ ಮತ್ತು ಸಹೃದಯತೆಯ ದ್ಯೋತಕವಾಗಿತ್ತು.

ಶಿಬಿರದ ಯಶಸ್ಸಿಗಾಗಿ ದುಡಿದ ಸಂಸ್ಥೆಯ ಪ್ರಿನ್ಸಿಪಾಲ್ ಮತ್ತು ಸಿಬ್ಬಂದಿ, ಆತಿಥೇಯರಾದ ಎಲ್ಲ ಕುಟುಂಬಗಳು ಮತ್ತು ಶಿಬಿರದ ತರಬೇತಿದಾರರೂ ಶಿಬಿರದ ಯಶಸ್ಸಿಗೆ ಮೂಲ ಕಾರಣರೂ ಆದ, ಎನ್. ಐ. ಎಸ್. ತರಬೇತಿ ಪಡೆದಿರುವ ಕೋಚ್ ವಿ. ಎಂ. ಶಿವಮೂರ್ತಿ ಇವರೆಲ್ಲ ಅಭಿನಂದನಾರ್ಹರು. ● ಅನಿಲ್ ಕುಮಾರ್.

ಓದುಗರ ಪತ್ರಗಳು

ಗಡಿಕಲ್ ಕೆನರಾ ಬ್ಯಾಂಕ್ ಸ್ಥಳಾಂತರ ಇಲ್ಲ

ಪ್ರಿಯರೆ,

'ಮುಂಜಾವು' ಪತ್ರಿಕೆಯಲ್ಲಿ ಈ ಹಿಂದೆ ಪ್ರಕಟಗೊಂಡ ಸುದ್ದಿಯ ಆಧಾರದ ಮೇಲೆ, ಹಿರೇಕೊಡಿಗೆ ಕೆನರಾ ಬ್ಯಾಂಕನ್ನು ಸ್ಥಳಾಂತರಿಸುವ ವಿಷಯದಲ್ಲಿ ಬ್ಯಾಂಕಿನ ಹಾಸನ ವಿಭಾಗೀಯ ವ್ಯವಸ್ಥಾಪಕರು ಹಿರೇಕೊಡಿಗೆ ಗ್ರಾಮಸ್ಥರನ್ನು ಮತ್ತು ಬ್ಯಾಂಕಿನ ಗ್ರಾಹಕರನ್ನು ೨೦-೧೨-೮೯ ರಂದು ಬ್ಯಾಂಕಿನ ಆವರಣದಲ್ಲಿ ಸಂದರ್ಶಿಸಿ, ಚರ್ಚಿಸಿ, ಸ್ಥಳಾಂತರ ನಿರ್ಣಯಕ್ಕೆ ವಿರೋಧವಿರುವುದರಿಂದ ನಿರ್ಣಯ ಕೈ ಬಿಟ್ಟಿರುವುದಾಗಿ ತಿಳಿಸಿ, ಅದರಂತೆ ಸ್ಥಳೀಯ ಬ್ಯಾಂಕಿನ ಶಾಖೆಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಿದ್ದಾರೆ.

ಸಾರ್ವಜನಿಕ ಅಭಿಪ್ರಾಯದ ಪ್ರಕಟಣೆಗೆ ಪತ್ರಿಕಾ ಪ್ರಚಾರ ಬಹಳ ಮುಖ್ಯವಾಗಿರುವುದರಿಂದ ಈ ಬಗ್ಗೆ ಸುದ್ದಿ ನೀಡಿದ 'ಮುಂಜಾವು'ಗೆ ಜನತೆ ಧನ್ಯವಾದ ಸಲ್ಲಿಸಿದ್ದಾರೆ.

ಹೊಸ್ಮನೆ ಗಮೇಶ್,
ಗಡಿಕಲ್ಲು.

ಶೃಂಗೇರಿ ತಾ| ರೈತಸಂಘಕ್ಕೆ ರಾಜೀನಾಮೆ

ಪ್ರಿಯರೆ,

ಶೃಂಗೇರಿ ತಾಲ್ಲೂಕಿನಲ್ಲಿ ರೈತರ ಸಮಸ್ಯೆಗಳು ಅನೇಕವಿದ್ದು, ಇವುಗಳ ನಿವಾರಣೆ ಮತ್ತು ರೈತರ ಹಿತರಕ್ಷಣೆಯನ್ನು ಸಂಘದ ಅಧ್ಯಕ್ಷರು ಕಡೆಗಣಿಸಿರುವುದರಿಂದ, ಅವರ ಅದಕ್ಷತೆಗೆ ನೊಂದು ನಾನು ಶೃಂಗೇರಿ ತಾ| ರೈತ ಸಂಘದ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ.

— ಕೆ ಸಿ. ಶಿವಪ್ಪ ಹೆಗ್ಡೆ,
ಕೊಚ್ಚವಳ್ಳಿ, ಶೃಂಗೇರಿ ತಾ||

ಬಿಂತ್ರವಳ್ಳಿ: ಸಾಕ್ಷರತಾ ಮಾಹಿತಿ ಸಭೆ

ಸಾಕ್ಷರತಾ ಕಾರ್ಯಕ್ರಮದ ಅನ್ವಯ ಬಿಂತ್ರವಳ್ಳಿ ಮಂಡಲ ಪಂಚಾಯ್ತಿಯ ಸ್ವಯಂ ಸೇವಕರಿಗೆ ತರಬೇತಿ ಹಾಗೂ ಮಾಹಿತಿ ಒದಗಿಸುವ ಸಭೆ ಡಿ. ೨೮ ರಂದು ಬಾಳಗಡಿಯಲ್ಲಿ ನಡೆಯಿತು.

ಕೊಪ್ಪ ತಾಲ್ಲೂಕಿನಲ್ಲಿ ಬಿಂತ್ರವಳ್ಳಿ ಮಂಡಲವನ್ನು ಸಂಪೂರ್ಣ ಸಾಕ್ಷರತೆಗಾಗಿ ಸರ್ಕಾರ ಆಯ್ಕೆ ಮಾಡಿದೆ. ಇಲ್ಲಿ ೬೮೦ ಮಂದಿ ಅನಕ್ಷರಸ್ಥರಿರುವ ಏಳು ಗ್ರಾಮಗಳಿವೆ. ಪ್ರತಿ ಹಳ್ಳಿಗೆ ಅದೇ ಹಳ್ಳಿಯ ಅಕ್ಷರಸ್ಥರು, ಸ್ವಯಂ ಸೇವಕರಾಗಿ ಸ್ವ-ಸ್ಫೂರ್ತಿಯಿಂದ ಕಲಿಸಲು ಮುಂದಾಗಬೇಕಿದೆ. ಇಲ್ಲಿ ಈಗ ಇಂಥ ೧೦೫ ಜನ ಮುಂದೆ ಬಂದಿದ್ದಾರೆ. ಪುರುಷರಿಗೆ ಪುರುಷರು, ಸ್ತ್ರೀಯರಿಗೆ ಸ್ತ್ರೀಯರೇ ಪಾಠ ಹೇಳುತ್ತಾರೆ. ಕಲಿಸುವವರಿಗೆ ಹಾಗೂ ಕಲಿಯುವವರಿಗೆ ಸರ್ಕಾರದಿಂದ ಒಂದೊಂದು ಕಿಟ್ ಹಾಗೂ ಎರಡು ಪುಸ್ತಕಗಳನ್ನು ಬಿಟ್ಟರೆ ಬೇರೇನೂ ಸವಲತ್ತುಗಳಿಲ್ಲ.

ಈ ಯೋಜನೆಯ ಉದ್ದೇಶವನ್ನು ಹಾಗೂ ಸ್ವಯಂ ಸೇವಕರಿಗೆ ಮಾಹಿತಿಯನ್ನು ವಿದ್ಯಾಧಿಕಾರಿ ರಾಮಕೃಷ್ಣ ಅವರು ನೀಡಿ ಅನಕ್ಷರಸ್ಥರನ್ನು ಕಲಿಕೆಯ ಬಗ್ಗೆ ಹೇಗೆ ಮನವೊಲಿಸಬೇಕು ಹಾಗೂ ಅವರಿಗೆ ಓದು, ಬರಹ, ಲೆಕ್ಕಾಚಾರ ಇವುಗಳನ್ನು ಸುಲಭವಾಗಿ ಅರ್ಥವಾಗುವಂತೆ ಹೇಗೆ ಕಲಿಸಬೇಕೆಂಬ ಬಗ್ಗೆ ಸ್ವಯಂ ಸೇವಕರಿಗೆ ಮಾಹಿತಿ ಒದಗಿಸಿದರು

೧೯೯೧ ಏಪ್ರಿಲ್ ಒಳಗೆ ಎಲ್ಲಾ ಸ್ವಯಂ ಸೇವಕರು ತಮ್ಮ ತಮ್ಮ ಹಳ್ಳಿಗಳಲ್ಲಿರುವ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಸಬೇಕಾಗಿದೆ.

ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕರಾದ ಪೂರ್ಣೇಶ್ ಅವರ ಆವೇಶಪೂರ್ಣ ಮಾತು ಸ್ವಯಂ ಸೇವಕರಲ್ಲಿ ಸ್ಫೂರ್ತಿಯನ್ನು ಹೆಚ್ಚಿಸಿತು. ಮಂಡಲ ಸದಸ್ಯರಾದ ಪಿ ಜಿ. ಗುರ್ಜರ್‌ರವರು ತಮ್ಮ ಎಸ್ಟೇಟಿನ ೨೦ ಮಂದಿ ಅನಕ್ಷರಸ್ಥರಿಗೆ ಪ್ರೋತ್ಸಾಹಧನವನ್ನೂ ಅವರನ್ನು ಅಕ್ಷರಸ್ಥರನ್ನಾಗಿಸಿದ ಶಿಕ್ಷಕರಿಗೆ ಸಂಬಳವನ್ನೂ ಬಹುಮಾನದ ರೂಪದಲ್ಲಿ ನೀಡುವುದಾಗಿ ತಿಳಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿಂತ್ರವಳ್ಳಿ ಮಂಡಲದ ಉಪ ಪ್ರಧಾನ ಶಾಂತಾರಾಂ ವಹಿಸಿದ್ದರು ಜಿ. ಪ. ಸದಸ್ಯೆ ಸುಮಿತ್ರಮ್ಮ ಹಾಜರಿದ್ದರು.

(ವರದಿ : ಕೆ.ಎನ್. ರಾಜೇಂದ್ರ)

ಗ್ರಾಹಕರ ವ್ಯಾಜ್ಯ ಪರಿಹಾರ ಆಯೋಗ

(೨ನೇ ಪುಟದಿಂದ)
ಹೊಣೆ ಮಾಡಿ ಸಹ ದೂರು ನೀಡಬಹುದು ಈ ದೂರುಗಳ ಬಗ್ಗೆ ವೇದಿಕೆ ಆಯಾ ಜಿಲ್ಲಾ ಕೇಂದ್ರಗಳಲ್ಲಿ ನಿಗದಿತ ದಿನಾಂಕದಂದು ವಿಚಾರಣೆ ನಡೆಸಿ ನ್ಯಾಯಯುತ ಪರಿಹಾರ ದೊರಕಿಸಲಾಗುವುದೆಂದು ವೈದ್ಯ ಅವರು ತಿಳಿಸಿದ್ದಾರೆ

ಮೋಸ-ವಂಚನೆ ಅಥವಾ ಗ್ರಾಹಕರಿಗೆ ಕಿರುಕುಳ, ನಿರ್ಲಕ್ಷ್ಯ ಮುಂತಾದುವು ಸಾಬೀತಾದರೆ ತಕ್ಕ ಪರಿಹಾರದ ಜೊತೆಗೆ ತಪ್ಪಿತಸ್ಥರಿಗೆ ೧೦ ಸಾವಿರ ರೂ ವರೆಗೂ ಜುಲ್ಮಾನೆ ಅಥವಾ ೩ ವರ್ಷದ ಸಜೆ ವಿಧಿಸಲು ಕಾಯಿದೆಯಲ್ಲಿ ಅವಕಾಶವಿದೆ.

೧ ಲಕ್ಷ ರೂ. ಮೌಲ್ಯದವರೆಗಿನ ವಿವಾದಗಳನ್ನು ಜಿಲ್ಲಾ ವೇದಿಕೆಯೂ, ೧೦ ಲಕ್ಷ ರೂ.ವರೆಗೆ ರಾಜ್ಯ ವೇದಿಕೆಯೂ, ಅದಕ್ಕಿಂತ ಹೆಚ್ಚಿನದನ್ನು ಕೇಂದ್ರ ವೇದಿಕೆಯೂ ಇತ್ಯರ್ಥಪಡಿಸುವುವು. ಜಿಲ್ಲಾ ವೇದಿಕೆಯ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ೩೦ ದಿನಗಳಲ್ಲಿ ಸಲ್ಲಿಸಬಹುದು.

ಗ್ರಾಹಕರು ಹೆಚ್ಚೆಚ್ಚು ಜಾಗೃತರಾಗಿ ಈ ಸವಲತ್ತಿನ ಸದುಪಯೋಗ ಪಡೆದುಕೊಳ್ಳಲು ಅಧ್ಯಕ್ಷರು ಕರೆಯಿತ್ತಿದ್ದಾರೆ. ದೂರು ನೀಡಲು ವಿಳಾಸ : ಅಧ್ಯಕ್ಷರು, ಗ್ರಾಹಕರ ಸಮಸ್ಯೆಗಳ ನಿವಾರಣಾ ವೇದಿಕೆ, ನಂ. ೨೨೫, 'ಬಿ'-ಬ್ಲಾಕ್, ಜೆ. ಪಿ. ನಗರ, ಮೈಸೂರು-೮. ರಾಜ್ಯ ಆಯೋಗದ ವಿಳಾಸ : ಬಸವಭವನ, ಬಸವೇಶ್ವರ ವೃತ್ತ, ಬೆಂಗಳೂರು. (ಸೌಜನ್ಯ : 'ಜನಮಿತ್ರ' ಮತ್ತು ವಾರ್ತಾ ಇಲಾಖೆ).

ಹೌದೆ — “ದೇವರು ದೀನ-ಅನಾಥರ ಸಹಚಾರಿ, ದುಃಖಿ-ದರಿದ್ರರ ಮುರುಕು ಗುಡಿಸಿಲಲಿ ಉಪವಾಸಿ” ?

ಇಂದು ದೇಶದಲ್ಲೆಲ್ಲಾ ಭಯ, ಆತಂಕದ ಪರಿಸ್ಥಿತಿ ಮೂಡಿದೆ. ದೇಶ ಎಂದೂ ಕಂಡು ಕೇಳರಿಯದ ಕೋಮು ದ್ವೇಷದ ಬೆಂಕಿಯಲ್ಲಿ ಉರಿಯುತ್ತಿದೆ. ಯಾರು ಏನು ಮಾಡುತ್ತಾರೋ ಎಂಬಭೀತಿ ಎಲ್ಲರಲ್ಲೂ ಆವರಿಸಿದೆ. ದೇಶದಾದ್ಯಂತ ನೂರಾರು ಮುಗ್ಧರ ಪ್ರಾಣ ಹಾನಿ, ಬಡವರ, ದಲಿತರ ಗುಡಿಸಲು ಜೋಪಡಿಗಳು, ಸಣ್ಣ ಪುಟ್ಟ ಅಂಗಡಿಗಳ ನಾಶ, ಒಂದು ಹೊತ್ತಿನ ಕೂಳಿಗೂ ಸಂಚಕಾರ, ಅಂದಿನ ಅನ್ನ ಅಂದೇ ಸಂಪಾದಿಸಿ ತಿನ್ನಬೇಕಿದ್ದ ಬಡ ಕೂಲಿಗಳ ಹೊಟ್ಟೆಗೆ ತಣ್ಣೀರಿನ ಬಟ್ಟೆ, ವಹಿವಾಟುಗಳ ಸ್ಥಗಿತ, ಶಾಲೆ ಕಾಲೇಜುಗಳ ಪಾಠ ಪ್ರವಚನಗಳಿಗೆ ಅಡ್ಡಿ.

ಇವುಗಳ ಜೊತೆಗೆ ಈ ಎಲ್ಲಾ ಗಲಭೆಗಳನ್ನು ನಿಯಂತ್ರಿಸಲು ಬಂದೋಬಸ್ತಿಗೆಂದು ಸರ್ಕಾರಕ್ಕೆ ಸಾವಿರಾರು ಕೋಟಿರೂಪಾಯಿಗಳ ಅನಗತ್ಯ ಖರ್ಚು. ಒಟ್ಟಿನಲ್ಲಿ ದೇಶದ ಸಂಪತ್ತು, ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ, ಉತ್ಪಾದನೆ ನಷ್ಟ. ಇವೆಲ್ಲ ಯಾವ ಪುರುಷಾರ್ಥಕ್ಕಾಗಿ, ಯಾವ ಧ್ಯೇಯೋದ್ದೇಶ ಸಾಧನೆಗಾಗಿ ? ಎಂದರೆ ಉತ್ತರ ಹೇಳಲು ನಾಲಿಗೆ ಹಿಡಿಯುತ್ತದೆ. ಕೇವಲ ಒಂದು ಗುಡಿ ಕಟ್ಟಲು ಇಷ್ಟೆಲ್ಲ ಅವಾಂತರ ! ಕೆಲವೇ ಪುರೋಹಿತರ ಹೊಟ್ಟೆ ಪಾಡಿಗಾಗಿ ದೇಶದ ತುಂಬೆಲ್ಲಾ ರಕ್ತದ ಕೋಡಿ!!

ಎಂ. ಎಲ್. ನಾಗಭೂಷಣ,
ಜಿಲ್ಲಾ ಸಂಚಾಲಕರು,
ಕರ್ನಾಟಕ ದಲಿತ ಸಂಘರ್ಷ ಸಮಿತಿ,
ಶಿವಮೊಗ್ಗ ಜಿಲ್ಲೆ

ಇದು ಆಶ್ಚರ್ಯಕರ ಸಂಗತಿಯಾದರೂ ಕೂಡಾ ನಾಚಿಕೆಗೇಡಿನ ವಾಸ್ತವವಾಗಿದೆ.

ಇಂದು ದೇಶದಲ್ಲಿ ಲಕ್ಷಾಂತರ ಜನರು ಒಂದು ಹೊತ್ತಿನ ಕೂಳಿಗೆ ಮೈ ಮೇಲೆ ತುಂಡು ಬಟ್ಟೆಗೆ ತಲೆಯ ಮೇಲೊಂದು ಸೂರಿಗೆ ಗತಿ ಇಲ್ಲದೆ ಒದ್ದಾಡುತ್ತಿರುವಾಗ, ಸಾವಿರಾರು ಯುವಕರು ಉದ್ಯೋಗವಿಲ್ಲದೆ ಸಂಕಟ ಪಡುತ್ತಿರುವಾಗ, ದೇಶದಲ್ಲಿ ಭ್ರಷ್ಟತೆ-ಲಂಚಗುಳಿತನ ತಾಂಡವವಾಡುತ್ತಿರುವಾಗ, ಅನಕ್ಷರತೆ-ಅಪೌಷ್ಟಿಕತೆ-ಅನಾರೋಗ್ಯ ಯಥೇಚ್ಛವಾಗಿರುವಾಗ, ದೇಶ ಸಾಲದಲ್ಲಿ ಮುಳುಗಿರುವಾಗ, ಅಷ್ಟೇ ಅಲ್ಲ, ದೇಶದ ಸಮಗ್ರತೆಗೇ ಒಳಹೊರಗುಗಳೆರಡರಿಂದಲೂ ಆತಂಕ ಹೆಚ್ಚಿರುವಾಗ—ಇಂಥ ವಿಷಮ ಸಮಯದಲ್ಲಿ ಈ ಗಂಭೀರ ಸಮಸ್ಯೆಗಳ ಪರಿಹಾರಕ್ಕೆ ಹೋರಾಟ ನಡೆಸುವ ಬದಲು, ಅಯೋಧ್ಯೆಯಲ್ಲಿ ಈಗಾಗಲೇ ನಾನೂರ ಅರವತ್ತೆರಡು ವರ್ಷಗಳ ಹಿಂದೆ ಕಟ್ಟಿದ, ಹಾಲೀ ಇರುವ ಬಾಬರೀ ಮಸೀದಿಯನ್ನು ಕೆಡವಿ ರಾಮ ದೇವಾಲಯ ಕಟ್ಟಲು ಹೊರಟಿರುವ ಈ ಬಿ. ಜೆ ಪಿ., ವಿಶ್ವ ಹಿಂದೂ ಪರಿಷತ್‌ಗಳಂಥ ಕೋಮು ಶಕ್ತಿಗಳ ಮತಿಭ್ರಮಣೆಗೆ ಯಾವ ಔಷಧಿ ಕೊಡಬೇಕೆಂಬುದೇ ಸಮಸ್ಯೆ.

ಧರ್ಮ, ವೇದಾಂತಗಳ ಬಗೆಗೆ ದಿನಗಟ್ಟಲೆ ಭಾಷಣ ಕೊರೆಯುವ, ಆದರೆ “ತಮ್ಮ” ಧರ್ಮವೇ ಪರಮ ಶ್ರೇಷ್ಠ ಎನ್ನುವ; ‘ಸರ್ವೇ ಜನಾಃ ಸುಖಿನೋ ಭವಂತು’ ಎಂದು ಮಂತ್ರಪಠಿಸಿದರೂ ಕೃತಿಯಲ್ಲಿ “ಸ್ವಜನಾಃ ಸುಖಿನೋ ಭವಂತು” ಎಂಬುದನ್ನು ಪಾಲಿಸುವ; ತಮ್ಮ ಪಟ್ಟ ಭದ್ರ ಹಿತಾಸಕ್ತಿಗಳಿಗಾಗಿ ಧಾರ್ಮಿಕತೆಯ ಸೋಗು ಹಾಕಿರುವ ಇವರಿಗೆ, ದೇವರ ಬಗ್ಗೆ ಅನುಭಾವಿಗಳು ಹೇಳಿರುವ “ಕಣ್ಣ ನೀರಿನಲಿ, ಮಣ್ಣ ಧೂಳಿನಲಿ ಹೊರಳುತ್ತಿರುವವರ ಸಹಚಾರಿ, ದೀನಾನಾಥರ, ದುಃಖಿದರಿದ್ರರ ಮುರುಕು ಗುಡಿಸಿಲಲಿ ಉಪವಾಸಿ” ಎಂಬ ಉಕ್ತಿಯಾಗಲಿ, ದೇವಾಲಯದ ಬಗ್ಗೆ “ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವಯ್ಯಾ” ಎಂಬ ಬಸವಣ್ಣನವರ ವಚನವಾಗಲೀ ಅರ್ಥವಾಗದಿರುವುದು ಆಶ್ಚರ್ಯವೇನಲ್ಲ.

ಕೋಮು ಶಕ್ತಿಗಳೇ ತಮ್ಮ ಓಟಿನ ಬೇಟೆಗೋಸ್ಕರ ಹಾಗೂ ಹಳೇ ಪುರೋಹಿತಶಾಹಿ ಮೌಲ್ಯಗಳ ಪುನರುತ್ಥಾನಕ್ಕೋಸ್ಕರ, ಏನೂ ಅರಿಯದ, ಒಂದು ಹೊತ್ತಿನ ಕೂಳಿಗೆ-ತುಂಡು ಬಟ್ಟೆಗೆ ಪರದಾಡುತ್ತಿರುವ ಮುಗ್ಧ ಶೂದ್ರ ವರ್ಗಗಳಿಗೆ ಧರ್ಮದ ಅಫೀಮು ತಿನ್ನಿಸಿ ಅಮಲಿನಲ್ಲಿ ತೇಲಿಸಿ ಗಲಭೆ ಮಾಡಿಸುತ್ತಿವೆ. ಯಾವ ರೀತಿಯಲ್ಲೂ, ಮುಗ್ಧರ-ಬಡವರ ಆರ್ಥಿಕ-ಸಾಮಾಜಿಕ ಬದುಕಿಗೆ ಸಹಾಯಕವಾಗದ, ಅಯೋಧ್ಯೆಯ ವಿವಾದಗ್ರಸ್ತ ಜಾಗದಲ್ಲಿ ರಾಮ ದೇಗುಲ ಕಟ್ಟುವ ನಿರುಪಯುಕ್ತ ಕೆಲಸಕ್ಕೋಸ್ಕರ ಏನೋ ಆಕಾಶವೇ ಕಳಚಿ ಬಿದ್ದಂತೆ ಬೊಬ್ಬೆ ಹಾಕುತ್ತಾ, ದೇಶಾದ್ಯಂತ ರಕ್ತ ಹರಿಸುತ್ತಿರುವುದು ಎಷ್ಟು ಮಟ್ಟಿಗೆ ಸರಿ ಎಂಬುದನ್ನು ಎಲ್ಲರೂ ಯೋಚಿಸಬೇಕಾಗಿದೆ.

ಶೂದ್ರ ಗೆದ್ದಲುಗಳು ಕಟ್ಟಿದ ಹುತ್ತದೊಳಗೆ ಪುರೋಹಿತಶಾಹಿ ಹಾವುಗಳ ಪಾರುಪತ್ಯ !

ದೀನ ದಲಿತರಲ್ಲಿ, ಅವರ ಮುರುಕು ಗುಡಿಸಿಲಲ್ಲಿ ದೇವರನ್ನು ಕಾಣಲು, ತಮ್ಮ ತನುವನ್ನು ದೇಗುಲವನ್ನಾಗಿ ಮಾಡಿ ಅಲ್ಲಿ ದೇವರ ಸಾಕ್ಷಾತ್ಕಾರವನ್ನು ಅನುಭವಿಸಲು ಯೋಗ್ಯತೆ ಇಲ್ಲದ ಧರ್ಮಾಂಧರು, ಯಾರದೋ ಪೂಜಾ ಸ್ಥಳವೇ ಆದ ಮಸೀದಿಯನ್ನು ಕೆಡವಿ, ಬೇರೆಯವರ ರಕ್ತ ಹರಿಸಿ ರಾಮ ದೇವಾಲಯ ಕಟ್ಟಲು ಹೊರಟಿರುವ ಈ ಹೀನ ಕಾರ್ಯವನ್ನು ಸ್ವತಃ ರಾಮನೇ ಇದ್ದರೂ ಕ್ಷಮಿಸಲಾರ!

ಇಂಥ ಹೀನತೆಯ ಪ್ರತೀಕವಾದ, ಕೋಮು ದ್ವೇಷಕ್ಕೆ ಕಾರಣವಾದ ರಥ ಯಾತ್ರೆ ಹಾಗೂ ಅದರ ನೇತಾರ ಎಲ್. ಕೆ. ಅಡ್ವಾಣಿಯವರಿಂದ ಕಬೀರ, ರಹೀಮ, ಷರೀಫ್, ರಾಮಕೃಷ್ಣ, ಪರಮಹಂಸ, ವಿವೇಕಾನಂದರಂಥವರ ಸರ್ವ ಧರ್ಮ ಸಮನ್ವಯ ಸಿದ್ಧಾಂತಕ್ಕೆ ಮಸಿ ಬಳಿದಂತಾಗಿದೆ. ಇಷ್ಟೆಲ್ಲಾ ಅಧ್ವಾನಗಳ ಪ್ರತೀಕವಾದ ಕೋಮುವಾದಿಗಳ ಹುಚ್ಚಾಟಕ್ಕೆ, ತೆವಲಿಗೆ ಬಲಿಯಾಗುತ್ತಿರುವವರು ಮಾತ್ರ ಅಮಾಯಕರೂ, ಮುಗ್ಧರೂ, ಆದ ದಲಿತರು, ಹಿಂದುಳಿದ ವರ್ಗದ ಶೂದ್ರ ಜಾತಿಗಳು ಎಂಬುದು ಅವರೆಷ್ಟು ಮರೆಮಾಚಿದರೂ ಸೂರ್ಯನಷ್ಟು ನಿಚ್ಚಳ.

ಯಾವ ಪುರೋಹಿತಶಾಹಿ ಶಕ್ತಿಗಳು ಆಸ್ತಿವಂತ ವರ್ಗಗಳ ಹಿತಕ್ಕೂ ತಮ್ಮ ಸಾರ್ವಭೌಮತ್ವಕ್ಕೂ ಚ್ಯುತಿ ಬಾರದಂತೆ ಈ ದೇಶದ ಶೂದ್ರ ವರ್ಗಗಳನ್ನು ಸಾವಿರಾರು ವರ್ಷಗಳಿಂದ ಅಜ್ಞಾನದ ಅಂಧಕಾರದಲ್ಲಿಟ್ಟು, ನಿರಂತರ ಶೋಷಣೆ ಮಾಡಿಕೊಂಡು ಬಂದವೋ ಅದೇ ಪುರೋಹಿತಶಾಹಿಗಳ ಆಧುನಿಕ ಮುಖವಾಡಗಳಾದ ಬಿ.ಜೆ.ಪಿ., ವಿಶ್ವ ಹಿಂದೂ ಪರಿಷತ್‌ಗಳಂಥ

ಒಂದು ವೇಳೆ ವಿವಾದಗ್ರಸ್ತ ಜಾಗದಲ್ಲೇ ಆಗಲಿ, ಅಥವಾ ಬೇರೆಲ್ಲೋ ಆಗಲಿ ದೇವಾಲಯ ಕಟ್ಟಿದರೂ ಕೂಡ ಅಲ್ಲಿ ಆಗುವುದೇನು? ದೇವಾಲಯ ಕಟ್ಟುವ ತಮ್ಮ ತೆವಲಿನ ಕೆಲಸವಾಗಬೇಕಾಗಿರುವ ಈ ಸಮಯದಲ್ಲಿ ‘ಎಲ್ಲರೂ ಹಿಂದು ಒಂದು, ಬಂಧು’ ಎಂದು ಬೊಬ್ಬೆ ಇಡುವ ಈ ಧರ್ಮಾಂಧರು ಅನಂತರ, ದೇವಾಲಯ ಕಟ್ಟಿದ ಆ ಎಲ್ಲ ಜಾತಿಯವರನ್ನು ದೇವಾಲಯದೊಳಗೆ ಬಿಡುತ್ತಾರೆಯೆ? ಯಾವುದೇ ಜಾತಿ ಭೇದವಿಲ್ಲದೇ ಎಲ್ಲಾ ಜಾತಿಯ ಅರ್ಹರನ್ನು ದೇವಾಲಯದ ಅರ್ಚಕರನ್ನಾಗಿ ಮಾಡುತ್ತಾರೆಯೇ?

ಏಕೆಂದರೆ ಯಾವ ಹಿಂದೂ ಧರ್ಮವನ್ನು ಬಿ.ಜೆ ಪಿ., ವಿಶ್ವ ಹಿಂದೂ ಪರಿಷತ್, ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರೆಸ್ಸೆಸ್) ಗಳು ಪರಮಶ್ರೇಷ್ಠ ಎಂದು ಕರೆದುಕೊಳ್ಳುತ್ತವೆಯೋ ಆ ಧರ್ಮದ ಮೂಲ ತತ್ವವೇ “ಅಪಸರ” (ದೂರಸರಿ) “ಮಾ ಸ್ಪೃಶ” (ಮುಟ್ಟಬೇಡ) ಎಂಬುದಾಗಿದೆ. ಈ ಮೂಲ ತತ್ವವನ್ನೇ ತಾನೇ ಶಂಕರಾಚಾರ್ಯ ಪ್ರತಿಪಾದಿಸಿದ್ದು? ಅದ್ವೈತ ಸಿದ್ಧಾಂತದ ಆಧ್ವರ್ಯುವೆಂದು ಮಾನ್ಯವಾಗಿರುವ ಈತ ಕಾಶಿ ಪಟ್ಟಣದ ಒಂದು ಗಲ್ಲಿಯಲ್ಲಿ ಚಾಂಡಾಲನೆದುರಾದಾಗ “ಅಪಸರ, ಹೇ ಚಾಂಡಾಲ, ಅಪಸರ” (ದೂರ ಸರಿ ಎಲೈ ಚಾಂಡಾಲ ದೂರಸರಿ) ಎಂದು ಅರಚಿದಂಥ ಪರಂಪರೆಯೇ ಇಂದೂ ಮುಂದುವರಿಯುತ್ತಿದೆ ಎಂಬುದಕ್ಕೆ ಉದಾಹರಣೆಗಳು—ಕಳೆದ ವರ್ಷ ಶೃಂಗೇರಿ ಮಠದ ಗದ್ದುಗೆ ಏರಿದ ಭಾರತೀ ತೀರ್ಥ “ಹರಿಜನರಿಗೆ ಮಠದಲ್ಲಿ ಪ್ರವೇಶ ಕೊಡಲಾಗುವುದಿಲ್ಲ. ಸನಾತನ ಧರ್ಮವನ್ನು ಪಾಲಿಸುವುದು ನಮ್ಮ ಕರ್ತವ್ಯ” ಎಂದದ್ದು; ಹಾಗೂ

ವೇದಿಕೆ

ಇದೇ ಪರಂಪರೆಯ ಪೂರ್ವಾಮ್ನಾಯ ಶಾಖೆಯಾದ ಪುರಿ ಮಠದ ಪೀಠಾಧಿಪತಿ “ಹರಿಜನರಿಗೆ ದೇವಾಲಯಪ್ರವೇಶ ನಿಷಿದ್ಧ” ಎಂದು ಅಪ್ಪಣೆ ಕೊಡಿಸಿದ್ದು.

ಈ ಅಪಸರ ಸಿದ್ಧಾಂತದ ಪಾಲನೆಯಲ್ಲಿ ದ್ವೈತಿಗಳೂ (ಮಾಧ್ವರು) ಅದ್ವೈತಿಗಳಿಗಿಂತ ಏನು ಕಡಿಮೆ ಇಲ್ಲ. ಹರಿಯ ಪರಮ ಭಕ್ತರಾದ ಕನಕದಾಸರನ್ನು ಉಡುಪಿ ಕೃಷ್ಣ ಮಠದ ಒಳಗೆ ಬಿಡದಂತೆ ಓಡಿಸಿದ್ದು ಅವರು ಕೇವಲ ಹುಟ್ಟಿನಿಂದ ಕುರುಬ-ಶೂದ್ರ ಜಾತಿಗೆ ಸೇರಿದ್ದುದು ಎಂಬ ಒಂದೇ ಕಾರಣಕ್ಕಾಗಿ ಅಲ್ಲವೇ? ಹೀಗೆ, ಅರ್ಹತೆ, ಆತ್ಮಶುದ್ಧಿಗಳಿಗೆ ಬೆಲೆ ಕೊಡದೇ ಕೇವಲ ಜಾತಿಗೆ ಮಾತ್ರ ಆದ್ಯತೆ ನೀಡಿ ಇಂದೂ ಕೂಡಾ ಅದೇ ನೀತಿಯನ್ನೇ ಮುಂದುವರಿಸಿಕೊಂಡು ಬರಲಾಗುತ್ತಿದೆ.

ಹಾಗೆಂದೇ, ಕೇವಲ ಹುಟ್ಟಿನಿಂದ ದಲಿತ ಜಾತಿಗೆ ಸೇರಿದ್ದರು ಎಂಬ ಕಾರಣಕ್ಕಾಗಿ ಆ ಕಾಲದ ಅಪ್ರತಿಮ ಪ್ರತಿಭಾವಂತ-ವಿದ್ಯಾವಂತರಾದ ಡಾ॥ ಬಿ. ಆರ್. ಅಂಬೇಡ್ಕರ್ ಅವರನ್ನು ಈ ಹಿಂದೂ ಸಮಾಜ ಅತ್ಯಂತ ಹೀನವಾಗಿ ನಡೆಸಿಕೊಂಡಿತು. ಆತನಿಗೆ ಕುಡಿಯಲು ನೀರು ಕೊಡಲಿಲ್ಲ, ಇರಲು ಮನೆ ಕೊಡಲಿಲ್ಲ. ಇಂದು ಅವರ ಜಯಂತಿ, ಶತಮಾನೋತ್ಸವ ಆಚರಿಸುವ ಈ ಬಿಜೆಪಿ-ಆರೆಸ್ಸೆಸ್ ಮಂದಿ ಅವರ ಫೋಟೋವೊಂದನ್ನು ಸ್ವಾಮೀಜಿಯೊಬ್ಬನ ಜೊತೆ ಪಲ್ಲಕ್ಕಿಯಲ್ಲಿಟ್ಟು, ಅದೇ ದಲಿತರ ಹೆಗಲ ಮೇಲೆ-ಈವರೆಗೆ ಮಲ ಹೊರಿಸಿದಂತೆ-ಹೊರಿಸಿ, ಮೆರವಣಿಗೆ ಮಾಡುತ್ತಿರುವರೇ ಹೊರತು, ಅವರ ಯಾವ ತತ್ವ, ಬೋಧನೆ, ಕಾಯಿದೆಗಳನ್ನು-ತಮ್ಮ ಮನೆಗಳಲ್ಲೂ ಸಹ-ಪಾಲಿಸಲು ಸಿದ್ಧರಿದ್ದಾರೆ?

ಬಾಬು ಜಗಜೀವನರಾಂ ಅನಾವರಣಗೊಳಿಸಿದ ಸ್ವಾಮಿ ಸಂಪೂರ್ಣಾನಂದರ ಪ್ರತಿಮೆಯನ್ನು ಗೋಮೂತ್ರ, ಗಂಗಾಜಲದಿಂದ ‘ಶುದ್ಧಿ’ಗೊಳಿಸಿದ್ದು, ಪ್ರಧಾನಿ ಇಂದಿರಾಗಾಂಧಿಯವರಿಗೆ ಪುರಿ ಮಠ ಪ್ರವೇಶಕ್ಕೆ ನಿಷೇಧ ವಿಧಿಸಿದ್ದು, ದೇವಾಲಯ ಪ್ರವೇಶಿಸಿದರೆಂದು ದಲಿತರ ಕೇರಿಗಳನ್ನೇ ಸುಡುತ್ತಿರುವುದು (ಈಚೆಗೆ ತುಮಕೂರು ಜಿಲ್ಲೆ ಉದಾಹರಣೆ)—ಇವೆಲ್ಲ ಇಂದಿಗೂ ಮುಂದುವರಿಯುತ್ತಿರುವ ಈ “ಅಪಸರ” ಸಿದ್ಧಾಂತದ ಆಚರಣೆಯೇ ಅಲ್ಲವೆ ?

ಹೀಗೆ, ಪುರೋಹಿತಶಾಹಿ ಧರ್ಮದಲ್ಲಿ ಶೂದ್ರ ಜಾತಿಗಳು ದೇವಾಲಯವನ್ನೇ ಪ್ರವೇಶಿಸುವಂತಿಲ್ಲ ಇನ್ನು, ಪೂಜಾರಿಗಳಾಗುವುದು, ಪುರೋಹಿತರು ಇವರ ಕೈಯಿಂದ ತೀರ್ಥ ಸ್ವೀಕರಿಸುವುದು ಹುಚ್ಚು ಕನಸದೀತು! ಹಾಗಾಗಿ ಈ ದೇಶದ ದಲಿತ, ಶೂದ್ರ ಜಾತಿಗಳೇನಿದ್ದರೂ ಕೋಮುವಾದಿ-ಜಾತಿವಾದಿ-ಪುರೋಹಿತಶಾಹಿಗಳ ತೆವಲಿಗೋಸ್ಕರ ಬೇರೊಂದು ಕೋಮಿನ ಅಮಾಯಕರನ್ನು ಕೊಲ್ಲುವ ಮೂಲಕ ತಮ್ಮನ್ನ

(೫ನೇ ಪುಟಕ್ಕೆ)

ಧಾರ್ಮಿಕತೆ ಪುಸ್ತಕದಿಂದ ವ್ಯಕ್ತಿಯ ವಿಕಾಸಕ್ಕೆ ಹೊರಳಬೇಕಿದೆ

ಇಂದು ಹಿಂದೂ-ಮುಸ್ಲಿಮರ ನಡುವೆ ಇಷ್ಟೊಂದು ಹಿಂಸಾ ಮನೋಭಾವ ಬೆಳೆಯಲು ಕಾರಣವೇನು? ಐತಿಹಾಸಿಕವಾಗಿ ನಡೆದು ಹೋಗಿರುವ ಆಕ್ರಮಣಗಳೆ? ಮುಸ್ಲಿಮರ ಧಾರ್ಮಿಕ ನಂಬಿಕೆ-ನಡವಳಿಕೆಗಳೆ? ಅಥವಾ ಭಾರತೀಯರ ಮನೋಭಾವನೆಯೆ?

ಸಾರಾಸಗಟಾಗಿ ಇವ್ಯಾವುವೂ ಅಲ್ಲವೆನ್ನಿಸುತ್ತದೆ.

೧. ಭಾರತೀಯರು ರಾಜಕೀಯವಾಗಿ ಓಟು ಮಾಡುವಾಗ ಪಕ್ಷವನ್ನು ನೋಡಿ ಹಾಕುತ್ತಾರೆಯೇ ಹೊರತು ಜನಾಂಗ ನೋಡಿ ಅಲ್ಲ.

೨. ಧಾರ್ಮಿಕ ಆಚರಣೆಗಳಲ್ಲಿ ಎರಡು ಜನಾಂಗಗಳೂ ತಮ್ಮ ಪರಿಮಿತಿಯಲ್ಲಿ ಸರಿಯಾಗಿಯೇ ವರ್ತಿಸಿವೆ.

೩. ಸಾಮಾಜಿಕ-ಆರ್ಥಿಕವಾಗಿಯೂ ಸಹ ಪರಸ್ಪರ ವ್ಯವಹಾರ, ಹೊಂದಾಣಿಕೆ, ಕಷ್ಟ ಸುಖಗಳಲ್ಲಿ ಭಾಗಿಯಾಗುವಿಕೆ-ಎಲ್ಲ ನಡೆದು ಬಂದಿದೆ

ಹಾಗಾದರೆ ಇಷ್ಟೆಲ್ಲ ನಿಠಪರಾಧಿಗಳ ಕೊಲೆಗಳಿಗೆ ಕಾರಣ ಯಾರು? ನಮ್ಮ ಆತ್ಮಸಾಕ್ಷಿ ಏನು ಹೇಳುತ್ತದೆ?

ಸಾಮಾಜಿಕವಾಗಿ ಕುಟುಂಬಗಳಲ್ಲಿನ ಅಭದ್ರತೆಯ ವಾತಾವರಣ, ನಿರುದ್ಯೋಗ-ಅರೆ ಉದ್ಯೋಗ, ಬಡತನ, ಜನಸಂಖ್ಯಾ ಸ್ಫೋಟದಿಂದ ಹುಟ್ಟಿರುವ ಸಮಸ್ಯೆಗಳು; ಶಿಕ್ಷಣ ನೀತಿಯ ವೈಫಲ್ಯ; ಅಶಾಂತಿಯುತ ಪೈಪೋಟಿಯುತ ಸಮಾಜ; **ರಾಜಕೀಯವಾಗಿ**, ಸರಿಯಾದ ನಾಯಕರ ಕೊರತೆ, ಕಪ್ಪು ಹಣದ ಚುನಾವಣೆ, ರಾಜಕಾರಣಿಗಳಿಗೆ ಸ್ವಯಂ ನಿರ್ಣಯ ತೆಗೆದುಕೊಳ್ಳಲಾರದ ಪರಿಸ್ಥಿತಿ, ಸ್ವಿಸ್ ಬ್ಯಾಂಕಿನಲ್ಲಿ ಹಣ ಇಡುವ ಮನೋಭಾವ,ಸಂಸ್ಕೃತಿ ಬಗೆ ತಾತ್ಸಾರ; **ಧಾರ್ಮಿಕವಾಗಿ**, ಆಡಂಬರದ ಆಚರಣೆಗಳಿಗೆ ಆದ್ಯತೆ, ಮತಾಂಧತೆಗೆ ಕಾರಣವಾದ ಕೇವಲ ಪುಸ್ತಕಗಳ ಅವಲಂಬನೆ, ಆಧುನಿಕತೆಗೆ ಹೊಂದಿಕೊಳ್ಳಲಾರದ ಮನೋಭಾವನೆ, ಪ್ರಚಾರ-ಪೈಪೋಟಿಯ ಸಮಾಜದಲ್ಲಿ ನೈಜ ಧಾರ್ಮಿಕತೆಯ ಅಧ್ಯಯನಕ್ಕೆ ಸಮಯದ ಅಭಾವ, ಸರಿಯಾಗಿ ಅರ್ಥೈಸಿಕೊಳ್ಳದ, ಆತ್ಮಸಾಕ್ಷಾತ್ಕಾರ ಹೊಂದಿರದ ಧಾರ್ಮಿಕ ಬೋಧಕರು, ಸಾಧು-ಸಂತರ ನುಡಿಗಳ ಬಗ್ಗೆ ನಿರ್ಲಕ್ಷ್ಯ; **ಐತಿಹಾಸಿಕವಾಗಿ**. ಸತ್ಯ ಸಂಗತಿಗಳ ಅಧ್ಯಯನಕ್ಕೆ ಅಲಕ್ಷ್ಯ.(ಇದಕ್ಕೆ ಅನಕ್ಷರತೆ ಕಾರಣವಾದರೂ ನಿರ್ಲಕ್ಷ್ಯವೂ ಇಂದಿನ-ಮುಂದಿನ ಬದುಕನ್ನು ಆಧಾರವಾಗಿ ಉಳ್ಳ ವಾಸ್ತವಿಕ ಧೋರಣೆಯ ಅಭಾವ—ಇವೆಲ್ಲ ಕಾರಣಗಳಿಂದ ಆಕ್ರೋಶಗೊಂಡಿರುವ ಈ ಸಮಾಜ ಈ ರೀತಿ ತನ್ನ ಆಕ್ರೋಶವನ್ನು ಹೊರಗೆಡವಿದೆ.

ಈ ರೀತಿ ತನ್ನ ಶಕ್ತಿಯನ್ನು ದುರ್ವಿನಿಯೋಗ ಮಾಡುವ ಬದಲು ವಾಸ್ತವಿಕ ಅಂಶಗಳತ್ತ ಸಮಾಜ ತನ್ನ ಗಮನ ಹರಿಸಬೇಕಾಗಿದೆ. ಪರಿಸರ ಮಾಲಿನ್ಯ, ಜನಸಂಖ್ಯಾ ಸ್ಫೋಟ, ಉಳ್ಳವರ ದುರಾಶೆ-ದುಂದು ವೆಚ್ಚಗಳಿಂದ ನಿರುದ್ಯೋಗ ಭೂತಾಕಾರ ತಾಳಿವೆ. ಅನಕ್ಷರತೆ ನಿವಾರಣೆ, ವಿಶ್ವ ಭ್ರಾತೃತ್ವ, ನೈಜ ಧಾರ್ಮಿಕತೆಯನ್ನು ಪುಸ್ತಕದಿಂದ ವ್ಯಕ್ತಿಯ ವಿಕಾಸದ ಕಡೆಗೆ, ಪೂಜಾ ಗ್ರಂಥ ತತ್ವದಿಂದ ನೈಜ ತತ್ವದ ಕಡೆಗೆ ಹೊರಳಿಸಬೇಕಾಗಿದೆ.

ಆಗ ಮಾತ್ರ ಈ ಹಿಂಸೆಯ 'ಬಿಚಾರ' ಕೊನೆಯಾಗಿ ಶಾಂತಿ ಪ್ರಗತಿ ಸಾಧ್ಯವಾದೀತು; ಕುವೆಂಪು ಹೇಳವಂತೆ ವಿಶ್ವ ಮಾನವರಾಗಲು ಸಾಧ್ಯವಾದೀತು; ವಿವೇಕಾನಂದರ, ರಾಮಕೃಷ್ಣ ಪರಮ ಹಂಸರ ಮತ್ತು ಈಗಿರುವ "೫೨ ಲಕ್ಷ ಸಾಧುಸಂತರ" ಬೀಡಾದ ಭಾರತ ಇಡೀ ವಿಶ್ವಕ್ಕೆ ತನ್ನ ಆಧ್ಯಾತ್ಮಿಕ ಶಕ್ತಿಯನ್ನು ಧಾರೆ ಎರೆಯಲು ಸಾಧ್ಯವಾದೀತು.

ವೇದಿಕೆ

— ಎಂ. ವಿ. ಶ್ರೀಕಾಂತ್,
ಗುಣವಂತೆ ಬಡಾವಣೆ, ಕೊಪ್ಪ.

ದೇವರು ಮುರುಕು ಗುಡಿಸಿಲಲಿ ಉಪವಾಸಿ?

(4ನೇ ಪುಟದಿಂದ)

ತಾವೇ ಕೊಂದುಕೊಂಡು, ಗಲಭೆಯಲ್ಲಿ ಕೈ ಕಾಲು ಮುರಿದುಕೊಂಡು, ಇದ್ದ ಅಲ್ಪ ಸ್ವಲ್ಪ ಆಸ್ತಿ. ಗುಡಿಸಲು-ಜೋಪಡಿಗಳನ್ನು ಹಾಳುಗೆಡವಿಕೊಂಡು, ಹೆಂಡಿರು ಮಕ್ಕಳು ಬಂಧುಬಳಗದವರನ್ನು ಅನಾಥರನ್ನಾಗಿ ಮಾಡಿ ಒಟ್ಟಾರೆ ಬದುಕನ್ನು ಹಾಳು ಮಾಡಿಕೊಂಡಷ್ಟೇ ಉಳಿಯಿತು. ಗುಡಿ ಕಟ್ಟಲು ಕಲ್ಲು ಮಣ್ಣು ಹೊತ್ತಿದ್ದೇ ಬಂತು. ಆದರೂ ಕೇವಲ "ಶೂದ್ರ ಮುಂಡೇವು" ಆಗಿ ತಾವೇ ಕಟ್ಟಿದ ಗುಡಿಯ ಹೊರಗೆ ನಿಲ್ಲುವುದು ಮಾತ್ರ ತಪ್ಪದು!

ಆದರೆ ಎಂದೂ ಗಲಭೆಗಳಲ್ಲಿ ಭಾಗವಹಿಸದೆ ಸುರಕ್ಷಿತವಾಗಿರುವ, ಎಂದೂ ಕಲ್ಲು ಮಣ್ಣು ಹೊರದ, ಕೈ ಕೆಸರು ಮಾಡಿಕೊಳ್ಳದ, ಬೆವರು ಸುರಿಸದ ಪುರೋಹಿತರು ಮಾತ್ರ, ಗೆದ್ದಲು ಕಟ್ಟಿದ ಹುತ್ತದೊಳಗೆ ಹಾವು ಬಂದು ಸೇರಿಕೊಂಡಂತೆ ಶೂದ್ರರು ಕಷ್ಟಪಟ್ಟು ಬೆವರು ಸುರಿಸಿ (ಜೊತೆಗೆ ಬೇರೆಯವರದೂ ತಮ್ಮದೂ ರಕ್ತ ಹರಿಸಿ) ಕಟ್ಟಿದ ಗುಡಿಯೊಳಗೆ ಬಂದು ಪಾರುಪತ್ಯ ನಡೆಸುತ್ತಾರೆ. ಗುಡಿ ಕಟ್ಟಿದವರನ್ನೇ ಹೊರಗಟ್ಟಿ ತಾವೇ ಶ್ರೇಷ್ಠರೆಂದು ಮೆರೆಯುತ್ತಾರೆ.

ಆದ್ದರಿಂದ ಪುರೋಹಿತಶಾಹಿಗಳ, ಕೋಮುವಾದಿಗಳ ಕುತಂತ್ರವನ್ನು ದಲಿತ-ಹಿಂದುಳಿದ ಶೂದ್ರ ಜಾತಿಗಳು ಅರ್ಥ ಮಾಡಿಕೊಂಡು, ಅಯೋಧ್ಯೆಯ ರಾಮ ದೇವಾಲಯ ಕಟ್ಟುವ ನೆವದಲಿನಲ್ಲಿ ತಮ್ಮ ಅಮೂಲ್ಯ ಜೀವನವನ್ನ ಹಾಳು ಮಾಡಿಕೊಂಡು ಗೋಳಾಡುವ ಬದಲಾಗಿ ತಮ್ಮ ದಿನ ನಿತ್ಯದ ನೆಮ್ಮದಿ ಜೀವನದ ಕಡೆಗೆ ಗಮನ ಹರಿಸುವುದರ ಜೊತೆಗೆ, ದೇಶದ ಕೋಮು ಸಾಮರಸ್ಯಕ್ಕೆ ರಾಷ್ಟ್ರೀಯ ಭಾವೈಕ್ಯತೆ-ಸಮಗ್ರತೆಗೆ ದುಡಿಯಬೇಕೆಂದು ನನ್ನ ನಮ್ರ ಮನವಿ.

ಈ ಸಂದರ್ಭದಲ್ಲಿ ರಾಷ್ಟ್ರ ಕವಿ ಕುವೆಂಪು ಅವರು ಹೇಳುವ "ಗುಡಿ-ಚರ್ಚ್-ಮಸೀದಿಗಳ ಬಿಟ್ಟು ಬನ್ನಿ" ಎಂಬ ಮಾತನ್ನು ನಾವು ನೆನೆಯಬೇಕಾಗಿದೆ. ಹಾಗೂ ಅವರೇ ಹೇಳುವ 'ಮನುಜ ಮತ ವಿಶ್ವ ಪಥ'ದೆಡೆಗೆ ಸಾಗಬೇಕಿದೆ; ವಿಶ್ವ ಮಾನವರಾಗಬೇಕಿದೆ.

ಹರಿಜನರ ದೇವಸ್ಥಾನ ಪ್ರವೇಶಕ್ಕೆ ಈಗ ಯಾರ ಅಡ್ಡಿಯಿಲ್ಲ

ತಾ. ೩೦-೧೨-೯೦ರ 'ವೇದಿಕೆ' ಯಲ್ಲಿ ಸುದೀರ್ಘವಾಗಿ ಬರೆದಿರುವ ಶೃಂಗೇರಿಯ ಕೆ. ಎಂ. ಗೋಪಾಲ್‌ರವರು ಖಂಡಿತ ಶ್ರೀರಾಮನ ಬಗ್ಗೆ ಚೆನ್ನಾಗಿ ತಿಳಿದಿದ್ದಾರೆ. "ಊರಿದ್ದಲ್ಲಿ ಹೊಲಗೇರಿ" ಎಂದಂತೆ ಬೆಂಡಿಗೇರಿ, ತತ್ತೂರು ಅಥವಾ ಗೋಪಾಲ್‌ರವರ ಊರಿನಲ್ಲೂ ಅಂಥವರಿರಬಹುದು. ಅಂದ ಮಾತ್ರಕ್ಕೆ ಎಲ್ಲರೂ ಹಾಗೆ ಮಾಡುತ್ತಾರೆಂದಾಗಲಿ, ಹರಿಜನ ಅಥವಾ ಇತರರನ್ನು ನಡೆಸಿಕೊಳ್ಳುತ್ತಾರೆನ್ನುವುದು ಸರಿಯಲ್ಲ.

ಕೊಪ್ಪದ ಪ್ರಸಿದ್ಧ ವೀರಭದ್ರ, ಈಶ್ವರ, ಗಣಪತಿ ಮುಂತಾದ ದೇವಸ್ಥಾನಗಳಲ್ಲಿ ಹರಿಜನರು ಸಹ ಎಲ್ಲರ ಜೊತೆಯಲ್ಲಿ ದೇವಸ್ಥಾನದೊಳಗೆ ಬಂದು ಸೇವೆ ಸಲ್ಲಿಸಿ ತೀರ್ಥ ಪ್ರಸಾದ ಪಡೆಯುತ್ತಾರೆ. ಯಾರೂ ಅಡ್ಡಿಪಡಿಸಿಲ್ಲ, ಅಥವಾ ಸಣ್ಣ ಮನಸ್ಸಿನಿಂದ ನೋಡಿಲ್ಲ. ಅಯೋಧ್ಯೆಯ ಶಿಲಾನ್ಯಾಸದಲ್ಲೂ ಮೊದಲ ಕಲ್ಲನ್ನು ಇಟ್ಟಿದ್ದು ಹರಿಜನನೇ ಅಲ್ಲವೇ? ತಾವು ಕೀಳು ಎಂಬ ಭಾವನೆ ಅವರಲ್ಲೇ ಆವರಿಸಿಕೊಂಡಂತೆ ಕಾಣುತ್ತದೆ.

ಹಿಂದೆ ಬ್ರಾಹ್ಮಣ, ವೈಶ್ಯ, ಶೂದ್ರ ಇತ್ಯಾದಿ ವ್ಯವಸ್ಥೆ ಮಾಡಿರಬಹುದು. ಕಾಲ ಕಾಲಕ್ಕೆ ಜನ, ಕಾನೂನು ಎಲ್ಲ ಬದಲಾದಂತೆ ಇವೂ ಬದಲಾಗುತ್ತವೆ. ಅದಕ್ಕೆ ಎಲ್ಲರೂ ಹೊಂದಿಕೊಳ್ಳಬೇಕು. ಹರಿಜನರಲ್ಲೇ ಎಷ್ಟೋ ಜನ ದೇವಸ್ಥಾನ ಅಥವಾ ಬ್ರಾಹ್ಮಣರ ಮನೆಯ ಒಳಗೆ ಕರೆದರೆ ತಾವೇ ಹಿಂದೆ ಸರಿಯುತ್ತಾರೆ.

ರಾಮನ ಬಗ್ಗೆ ಹೇಳುವುದಾದರೆ, ಅವನು ತನ್ನ ಮತ್ತು ಹೆಂಡತಿಯ ಮೇಲಿರುವ ಆಪವಾದ ಎಲ್ಲಾ ತಪ್ಪೆಂದು ಜಗತ್ತಿಗೆ ತೋರಿಸಲು ಹಾತೊರೆದಿದ್ದೇ ಪತ್ನಿಯನ್ನು ಪರೀಕ್ಷೆಗೊಡ್ಡಲು ಕಾರಣ.

ಇಟ್ಟಿಗೆ, ಜ್ಯೋತಿ ಮೆರವಣಿಗೆಗೆ ಸ್ವಯಂ ಸ್ಫೂರ್ತಿ ಹಾಗೂ ಭಕ್ತಿಯಿಂದ ಬಂದಿದ್ದನ್ನು ನಾವು ಕೇಳಿದ್ದೇವೆ. ಎಳೆದು ತಂದು ಕುಣಿಸಿದ ವರದಿ ಕೇಳಿಲ್ಲ.

ಅಯೋಧ್ಯೆಯ ರಾಮ ಮಂದಿರದ ವಿವಾದವನ್ನು ಸೀಟು-ಓಟಿಗಾಗಿ ರಾಜಕಾರಣಿಗಳೇ ಬೃಹತ್ ಸಮಸ್ಯೆಯಾಗಿ ಸೃಷ್ಟಿಸಿದ್ದು. ನಮ್ಮ ದೇಶದಲ್ಲಿ ಸೀಟು-ಓಟಿನ ಪ್ರಾಮುಖ್ಯತೆ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೂ ರಾಜಕಾರಣಿಗಳು ಸಮಸ್ಯೆ ಇಲ್ಲದಿದ್ದರೂ ಯಾರನ್ನಾದರೂ ಎತ್ತಿಕಟ್ಟಿಯಾದರೂ ಸಮಸ್ಯೆ ಸೃಷ್ಟಿಸುತ್ತಾರೆ. ರಾಷ್ಟ್ರೀಯ ಪ್ರಜ್ಞೆಯುಳ್ಳ ಪ್ರಜೆ, ನಾಯಕ ಎಲ್ಲಿಯವರೆಗೆ ಇರುವುದಿಲ್ಲವೋ ಅಲ್ಲಿಯವರೆಗೂ ನರಮೇಧ, ರಕ್ತಪಾತ ನಮ್ಮ ದೇಶಕ್ಕೆ ಕಟ್ಟಿಟ್ಟ ಬುತ್ತಿ.

ಇದನ್ನೆಲ್ಲ ಯೋಚಿಸಿ ಭಾರತೀಯರೆಲ್ಲ ಒಂದಾಗದಿದ್ದರೆ, ನಾವು-ನೀವು ಇದ್ದಲ್ಲೇ. ರಾಜಕಾರಣಿಗಳ ಸ್ವಿಸ್ ಬ್ಯಾಂಕ್ ಖಾತೆ ಬೆಳೆಯುತ್ತದೆ.

—ಎಂ. ಎಸ್. ಕೋದಂಡರಾಂ,
ಕೊಪ್ಪ

ಕನ್ನಡ ಅಂಕಿ ಕಲಿತು ಬಳಸಿ
೦ ೧ ೨ ೩ ೪ ೫ ೬ ೭ ೮ ೯

ಅಂಬೇಡ್ಕರ್ ಜನ್ಮ ಶತಾಬ್ದಿ ಸಮಾರಂಭ

ಕೊಪ್ಪ : ಡಾ|| ಅಂಬೇಡ್ಕರ್ ಜನ್ಮ ಶತಮಾನೋತ್ಸವ ಸಮಾರಂಭ ತಹಸೀಲ್ದಾರ್ ಜಿ.ಎಸ್. ನಾಯಕ್‌ರವರ ಅಧ್ಯಕ್ಷತೆಯಲ್ಲಿ ಜ. ೩ ರಂದು ಇಲ್ಲಿ ನಡೆಯಿತು.

ಶತಮಾನೋತ್ಸವ ಜಿಲ್ಲಾ ಸಮಿತಿ ಸಂಚಾಲಕರಾದ ಗೊರಸುಕುಡಿಗೆ ಗಜೇಂದ್ರ ಅವರು ಮುಖ್ಯ ಅತಿಥಿಯಾಗಿ ಮಾತನಾಡುತ್ತಾ, ಮಹಾ ಮಾನವತಾವಾದಿ ಡಾ|| ಬಿ. ಆರ್. ಅಂಬೇಡ್ಕರ್‌ರವರು ತುಳಿತಕ್ಕೊಳಗಾದ ಜನಾಂಗಗಳ ಆಶಾ ಜ್ಯೋತಿ. ಮಾನವ ಹಕ್ಕಿನಿಂದ ವಂಚಿತರಾದ ವ್ಯಕ್ತಿಗಳ ಪರವಾಗಿ ಹೋರಾಡಿದರು. ಸಮಾಜದ ಕೊನೆಯ ಜಾತಿಯಲ್ಲಿ ಜನಿಸಿದ್ದು, ಕಿತ್ತು ತಿನ್ನುವ ಬಡತನವಿದ್ದರೂ ಶ್ರಮದ ಫಲದಿಂದ ಸಂವಿಧಾನ ಶಿಲ್ಪಿಯಾದರು ಎಂದರು.

ಅಂಬೇಡ್ಕರ್‌ರವರು ನಿಜವಾಗಿ ಬ್ರಾಹ್ಮಣ ವಿರೋಧಿಯಾಗಿರಲಿಲ್ಲ ಮನುಸ್ಮೃತಿಯ ಕೆಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯವಿತ್ತು. ಅದನ್ನು ತೋರ್ಪಡಿಸುವ ಸಲುವಾಗಿ ಅದರ ಕೆಲವು ಪುಟಗಳನ್ನು ಮಾತ್ರ ಸುಟ್ಟು, ಹಿಂದೂ ಸಮಾಜಕ್ಕೆ ಅವಶ್ಯವಾಗಿರುವಂಥ ಇನ್ನೊಂದು ಸ್ಮೃತಿಯನ್ನು ಕೊಟ್ಟಂತಹ ಮೂಲ ಪುರುಷರು. ಕಂದಾಚಾರಿಗಳ, ದಲಿತ ಜನಾಂಗದ ಸಂಪ್ರದಾಯವಾದಿಗಳ ವಿರೋಧ ಕಟ್ಟಿಕೊಂಡ ಈ ದಲಿತ ಧೀಮಂತ ನಾಯಕ ೧೯೫೬ರಲ್ಲಿ ತಮ್ಮ ೩ ಲಕ್ಷ ಮಂದಿ ಅನುಯಾಯಿಗಳೊಂದಿಗೆ ಹಿಂದೂ ಧರ್ಮ ತ್ಯಜಿಸಿ ಬೌದ್ಧ ಧರ್ಮ ಸ್ವೀಕರಿಸಿದರು. ಅನೇಕ ಸಂಘ-ಸಂಸ್ಥೆಗಳು, ವ್ಯಕ್ತಿಗಳು ಮೇಲ್ನೋಟಕ್ಕೆ ಅಂಬೇಡ್ಕರ್‌ರವರ ವಿಚಾರಧಾರೆಯನ್ನು ಒಪ್ಪಿಕೊಂಡಂತೆ ನಟಿಸುತ್ತಿದ್ದು, ಅಂತರಂಗದಲ್ಲಿ ದಲಿತ ಜನಾಂಗಗಳ ಏಳಿಗೆಯನ್ನು ಮಟ್ಟ ಹಾಕಲು ಸಂಚು ನಡೆಸುತ್ತಿದ್ದಾರೆ ಎಂದ ಗಜೇಂದ್ರ ಅವರು ಈ ಬಗ್ಗೆ ಪ್ರತಿಯೊಬ್ಬರೂ ಜಾಗೃತರಾಗಿರಬೇಕೆಂದರು.

ಆ ಮಹಾನ್ ನಾಯಕನ ತತ್ವವನ್ನು ನಾವೆಲ್ಲ ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಆಚರಿಸಿದಲ್ಲಿ ಮಾತ್ರ ಅದಕ್ಕೊಂದು ಈ ರೀತಿಯ ಸಮಾರಂಭಕ್ಕೊಂದು ಅರ್ಥ ಬರುತ್ತದೆ ಎಂದರು.

(೫ನೇ ಪುಟಕ್ಕೆ)

ತೀರ್ಥಹಳ್ಳಿಯಲ್ಲಿ ಯಶಸ್ವೀ ಫಲಪುಷ್ಪ, ಇಕೆಬಾನ ಮತ್ತು ಬೊನ್ಸಾಯ್ ಪ್ರದರ್ಶನ

ತೀರ್ಥಹಳ್ಳಿ : ಫಲಪುಷ್ಪ, ಇಕೆಬಾನ ಮತ್ತು ಬೊನ್ಸಾಯ್ ಪ್ರದರ್ಶನವೊಂದು ಇಲ್ಲಿನ ಉದ್ಯಾನ ಕಲಾ ಸಂಘ, ವಿಹಂಗಮ ನರ್ಸರಿ, ಕೆನರಾ, ಕಾರ್ಪೊರೇಶನ್ ಬ್ಯಾಂಕ್‌ಗಳು ಮತ್ತು ತೋಟಗಾರಿಕೆ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ, ಸರ್ಕಾರಿ ಬಾಲಿಕಾ ಪ್ರೌಢ ಶಾಲೆಯ ವಿದ್ಯಾರ್ಥಿನೀ ಸಂಘದ ಸಹಾಯಾರ್ಥ ಡಿ. ೧೭ ರಿಂದ ೧೯ ರ ವರೆಗೆ ನಡೆಯಿತು.

ಇದೇ ಅಂಗವಾಗಿ ಡಿ. ೧೯ ರಂದು ತೀರ್ಥಹಳ್ಳಿಯ ಉದ್ಯಾನ ಕಲಾ ಸಂಘದ ಅಧ್ಯಕ್ಷೆ ಶ್ರೀಮತಿ ಕಲಾ ಎನ್. ಮೂರ್ತಿಯವರ ಅಧ್ಯಕ್ಷತೆಯಲ್ಲಿ ವಿಚಾರ ಸಂಕಿರಣವೊಂದು ನಡೆಯಿತು. ವಿಹಂಗಮ ನರ್ಸರಿಯ ಕೆ. ಆರ್. ದಯಾನಂದ ಸ್ವಾಗತಿಸಿದರು.

ಮೂಡುಬಿದರೆ ಬಾಸೆಲ್ ಮಿಶನ್ ಫಾರಂನ ಡಾ॥ ಎಲ್. ಸಿ. ಸೋನ್ಸ್‌ರವರು ತೆಂಗಿನ ಜೊತೆ ಉಪ ಬೆಳೆಯಾಗಿ ಅನಾನಸ್, ಕಾಳು ಮೆಣಸು ಮತ್ತು ಹಣ್ಣಿನ ಗಿಡಗಳನ್ನು ಬೆಳೆಯುವ ಬಗ್ಗೆ ವಿವರಿಸಿ, ರೈತರ ಪ್ರಶ್ನೆಗಳಿಗೆ ಉತ್ತರಿಸಿದರು. ಇವನ್ನು ಎಲ್ಲಿ, ಯಾವ ಬೆಳೆಯ ನಡುವೆ ಬೆಳೆಯಬೇಕೆಂಬುದನ್ನು ವಿವರಿಸಿದರು.

ಯಾವುದೇ ಬೆಳೆ ಸೂರ್ಯನ ಶಕ್ತಿಯನ್ನು ಪರಿವರ್ತಿಸಿಕೊಳ್ಳುತ್ತದೆ. ಒಂದು ಎಕರೆ ದಟ್ಟ ಕಾಡಿನಲ್ಲಿ ಅತಿ ಹೆಚ್ಚು ಸೂರ್ಯನ ಶಕ್ತಿ ಪರಿವರ್ತನೆ ಆಗುತ್ತದೆ ಆದುದರಿಂದ ನಮ್ಮ ಜಮೀನಿನಲ್ಲಿ ಸೂರ್ಯನ ಬೆಳಕು ನೆಲಕ್ಕೆ ಬೀಳದ ಹಾಗೆ ಗಿಡಗಳ ದಟ್ಟಣೆ ನಿರ್ಮಿಸಬೇಕು. ಉದಾಹರಣೆಗೆ, ತೆಂಗು ಬೆಳೆಯನ್ನು ಪ್ರಧಾನ (ಮೂಲ) ಬೆಳೆಯಾಗಿ ಬೆಳೆದರೆ, ಅದರ ನಡುವೆ ಕೋಕೋ, ಅನಾನಸು ಮೊದಲಾದ ಉಪ ಬೆಳೆಯನ್ನು ಬೆಳೆಯುವುದು. ಹಾರ್ಮೋನ್ ಬಳಕೆಯಿಂದ ಬೇರೆ ಬೇರೆ ಕಾಲದಲ್ಲೂ ಬೆಳೆಗಳನ್ನು ಬೆಳೆಸಿ ಮಾರಾಟಮಾಡಬಹುದು ಯಾವುದೇ ಬೆಳೆಯ ಖರ್ಚು-ವೆಚ್ಚದ ಲೆಕ್ಕಾಚಾರ ಹಾಕುವಾಗ 'ಒಂದು ಎಕರೆಗೆ ಎಷ್ಟು ಖರ್ಚು ಬಿದ್ದಿದೆ' ಎಂದು ನೋಡದೆ, 'ಒಂದು ಕಿಲೋಗೆ ಎಷ್ಟು ಖರ್ಚು ಬಿತ್ತು' ನೋಡಬೇಕು ಒಂದು ಎಕರೆ ಪ್ರದೇಶದಲ್ಲಿ ಉಪ ಬೆಳೆಯಾಗಿ ೪೦೦೦ ಅನಾನಸು ಬೆಳೆಯುವುದಕ್ಕಿಂತ ೧೦,೦೦೦ ಅನಾನಸು ಬೆಳೆಯನ್ನೇ ಪ್ರಧಾನ ಬೆಳೆಯಾಗಿ ಬೆಳೆದು ಕಳೆಗಳನ್ನು ನಿಯಂತ್ರಿಸಬಹುದು ಎಂದರು

ಅಂಗಾಂಶ ಕಸಿ (tissue culture ಕುರಿತು ಕೇರಳದ ಕೊಚ್ಚಿಯ ಎ. ವಿ. ಥಾಮಸ್ ಅಂಡ್ ಕಂಪೆನಿಯ ಸುಶೀಲ್ ಕುಮಾರ್ ವಿವರಿಸಿದರು ಇದರಿಂದ ಇಳುವರಿ ಗಣನೀಯವಾಗಿ ಹೆಚ್ಚುವುದಲ್ಲದೆ, ೧೮ ವಾರದಲ್ಲಿ ಮೊಳಕೆಯೊಡೆವ ಏಲಕ್ಕಿ ಕೇವಲ ಮೂರೇ ವಾರದಲ್ಲಿ ಮೊಳಕೆ ಬರುತ್ತದೆ ಹಾಗೂ ಮೊಳಕೆಯೊಡೆವ (ಬೀಜದ) ಪ್ರಮಾಣ ಕೂಡ ಜಾಸ್ತಿ ಎಂದರು.

ಕೊನೆಯಲ್ಲಿ ನೇಂದ್ರ ಬಾಳೆ, ಸೇವಂತಿಗೆ, ಮೊದಲಾದ ಲಾಭದಾಯಕ ಬೆಳೆಗಳ ಬಗ್ಗೆ ವಿಡಿಯೊ ಪ್ರದರ್ಶನ ಏರ್ಪಡಿಸಲಾಗಿತ್ತು.

(ವರದಿ : ಜೆ ಎ. ಶ್ರೀನಿಧಿ)

ಅಡಿಕೆ ಧಾರಣೆ

ಶಿವಮೊಗ್ಗ ೪-೧-೯೧

ಸರಕು : ೪೮೮೦-೫೪೯೯

ಬೆಟ್ಟೆ : ೩೯೮೧-೪೪೭೯

ಗೊರಬಲು : ೨೬೬೧-೩೧೮೯

ಇಡಿ : ೩೮೪೯-೪೦೦೦

ಸಾಗರ ೪-೧-೯೧

ಬೆಟ್ಟೆ (ಇಡಿ) : ೩೭೫೨-೪೧೬೯

ಇಡೀರಾಶಿ : ೪೦೮೯-೪೮೮೯

ಆಪಿ : ೫೦೮೦-೫೪೮೯

ಚಾಲಿ : ೩೮೮೬-೪೫೦೬

ಕೊಪ್ಪ ರೋಟರ್‍ಯಾಕ್ಟ್‌ನಿಂದ ಯಶಸ್ವಿ ಆಟೋಟ ಸ್ಪರ್ಧೆ

ಕೊಪ್ಪ: ಇಲ್ಲಿನ ರೋಟರ್‍ಯಾಕ್ಟ್ ಕ್ಲಬ್ ೧೮ ವರ್ಷದೊಳಗಿನವರಿಗಾಗಿ ಡಿ. ೨೫ ರಂದು ಏರ್ಪಡಿಸಿದ್ದ ಆಟೋಟ ಸ್ಪರ್ಧೆಗಳಲ್ಲಿ ೨೦೦ ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು.

ಸಂಜೆ ಕೆ ಪಿ ರಮೇಶ್ ಅಧ್ಯಕ್ಷತೆಯಲ್ಲಿ ನಡೆದ ಮುಕ್ತಾಯ ಸಮಾರಂಭದಲ್ಲಿ ಜೀವ ವಿಮಾ ನಿಗಮದ ಉದ್ಯೋಗಿ ಎಸ್. ಎಸ್. ಭಟ್ ಬಹುಮಾನ ವಿತರಿಸಿದರು. ಕೆ. ಎಸ್. ಶಾಂತಾರಾಂ ಅತಿಥಿಯಾಗಿದ್ದರು. ವೆಂಕಟೇಶ್ ಕೋಟೆ ವಂದಿಸಿದರು ನಂತರ ಮಕ್ಕಳಿಂದ ಮನರಂಜನಾ ಕಾರ್ಯಕ್ರಮ ನಡೆಯಿತು.

ಗ್ರಾಮ ಸಹಾಯಕರ ಚಳುವಳಿ

ಕೊಪ್ಪ : ಕಂದಾಯ ಇಲಾಖೆಯಲ್ಲಿ ಕನಿಷ್ಠ ದಿನಗೂಲಿಗಿಂತಲೂ ಕಡಿಮೆ ಪ್ರತಿಫಲಕ್ಕೆ ದುಡಿಯುತ್ತಿದ್ದು, ತಮ್ಮನ್ನು 'ಡಿ' ದರ್ಜೆ ನೌಕರರೆಂದು ಖಾಯಂ ಮಾಡುವುದು ಮುಂತಾದ ಬೇಡಿಕೆಗಳ ಈಡೇರಿಕೆಗಾಗಿ ಕಳೆದ ಒಂದು ವರ್ಷದಿಂದಲೂ ಹಂತ ಹಂತವಾಗಿ ಚಳುವಳಿ ನಡೆಸುತ್ತಿರುವ ಗ್ರಾಮ ಸಹಾಯಕರು ಜ. ೧ ರಿಂದ ೫ರ ವರೆಗೆ ಪೂರ್ಣ ಕೆಲಸ ನಿಲ್ಲಿಸಿ ಮುಷ್ಕರ ನಡೆಸಿದರು.

ಕೊಪ್ಪದಲ್ಲಿ ಜ. ೧, ೨ ಮತ್ತು ೫ ರಂದು ತಾ॥ ಕಛೇರಿ ಮುಂದೆ ಧರಣಿ ನಡೆಸಿ, ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು.

ವಿರೋಧಿ ಸದಸ್ಯರ ರಾಜೀನಾಮೆ

(೧ನೇ ಪುಟದಿಂದ)

ಸಭೆಯ ಒಪ್ಪಿಗೆ ಪಡೆಯುತ್ತಿಲ್ಲ; ಎಲ್ಲೋ ಕೆಲವು ವಿಚಾರಗಳನ್ನು ಮಾತ್ರ ಕಡೇ ಗಳಿಗೆಯಲ್ಲಿ ತಿಳಿಸುತ್ತಾರೆ ಎಂಬುದಾಗಿ ವಿರೋಧಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದಾಗ ಕಾಂಗ್ರೆ ಸದಸ್ಯರೂ ಧ್ವನಿಗೂಡಿಸತೊಡಗಿದರು.

ಈ ವಿಚಾರಗಳಲ್ಲಿ ತನ್ನದು ತಪ್ಪಾಗಿದೆ ಎಂದು ಪ್ರಧಾನ ವಿ. ಬಿ. ವಿವೇಕ್ ಹೇಳಿದ್ದು ಸದಸ್ಯರನ್ನು ಸಮಾಧಾನಿಸಲಿಲ್ಲ "ನಾಗರಾಜ ರಾವ್ ಅವರಿಂದ ರಸೀದಿ ವಾಪಸ್ ಪಡೆಯಲು ನಿಮಗೆ ಆಗಲಿಲ್ಲ. ಈಗ ಅವರು ನೋಟೀಸ್ ಕೊಟ್ಟಿದ್ದಾರೆ. ಅವರಿಂದ ರಸೀದಿ ವಾಪಸ್ ಪಡೆಯಿರಿ ಇಲ್ಲವೆ ರಾಜೀನಾಮೆ ನೀಡಿ" ಎಂದೂ ಸದಸ್ಯರು ಆಗ್ರಹಿಸಿದರು.

ಜಿಲ್ಲಾ ಯುವ ಮೇಳಕ್ಕೆ ನೆರವು ನೀಡಿದ್ದು, ಈಶನ್‌ರವರಿಗೆ ನಿವೇಶನ ನೀಡಿದ್ದು ಎಲ್ಲ ಸಂತೋಷದ ಸಂಗತಿಗಳೇ; ನಮ್ಮ ವಿರೋಧವೇನಿಲ್ಲ ಆದರೆ ಮಂಡಲ ಸದಸ್ಯರಿಗೆ ಮುಂಚಿತವಾಗಿ ತಿಳಿಸಬೇಡವೆ?

ಹಂದಿ ಮಾಂಸದ ಅಂಗಡಿಯಂಥ ಸೂಕ್ಷ್ಮ ವಿಚಾರಗಳಲ್ಲಿ ಜಿಲ್ಲಾಧಿಕಾರಿಗಳು ನೇರವಾಗಿ ತಮ್ಮ ಗಮನಕ್ಕೆ ತರದೆ ಯಾವ ತೀರ್ಮಾನ ಕೈಗೊಳ್ಳಬಾರದೆಂದು ಸ್ಪಷ್ಟ ನಿರ್ದೇಶನ ನೀಡಿದ್ದರೂ ಸಂತೆ ಮಾರ್ಕೆಟ್ ಬಳಿ ಮತ್ತೊಂದು ಅಂಗಡಿಗೆ ಮಂಡಲ ಸದಸ್ಯರ ಗಮನಕ್ಕೆ ತರದೆಯೇ ಪರವಾನಗಿ ನೀಡಿರುವುದು-ಇವೆಲ್ಲ "ಕೇವಲ ತಪ್ಪು"ಗಳಲ್ಲ ಇದು ಸದಸ್ಯರನ್ನು ಕಡೆಗಣಿಸುವ ಸರ್ವಾಧಿಕಾರೀ ಧೋರಣೆ ಎಂದು ಒಕ್ಕೊರಲಿನಿಂದ ಸದಸ್ಯರೆಲ್ಲ ಪ್ರತಿಭಟಿಸಿ ಸಭಾತ್ಯಾಗ ಮಾಡಿದಾಗ ಸಭೆ ಬರ್ಖಾಸ್ತಾಯಿತು.

ಅಂಬೇಡ್ಕರ್ ಜನ್ಮ ಶತಾಬ್ದಿ ಆಚರಣೆ

(೫ನೇ ಪುಟದಿಂದ)

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಮಾಡಿದ ಗಿರಿಜಾ ಶಂಕರ್ ನಾಯಕ್ ಮಾತನಾಡುತ್ತ, ನಮ್ಮ-ನಮ್ಮಲ್ಲಿ ಶ್ರೇಷ್ಠ-ಕನಿಷ್ಠವೆಂದು ಜಾತಿಯ ವಿಷಯದಲ್ಲಿ ಕಚ್ಚಾಡದೆ, ಮಾನವ ಜನಾಂಗವೆಲ್ಲಾ ಒಂದೇ ಎಂದು ತಿಳಿದು, ಅಂಥ ಮಾನವೀಯ ಮೌಲ್ಯಗಳನ್ನು ಉಳಿಸಲು ಹೋರಾಡಲು ಕರೆಯಿತ್ತರು.

ಎಲ್.ಎನ್. ಶರ್ಮ ಸ್ವಾಗತಿಸಿ, ಸುಧಾಕರ್ ವಂದಿಸಿದರು.

ವ್ಯವಸ್ಥಾಪಕ-ಸಂಚಾಲಕರ ಬಳಗವನ್ನು ಹೊರತುಪಡಿಸಿದರೆ ಶೇ. ೯೦ ಕ್ಕೂ ಮಿಕ್ಕಿ ದಲಿತ ಜನಾಂಗದವರು. ಮತ್ತು ಮಕ್ಕಳೇ ತುಂಬಿಕೊಂಡಿದ್ದ ತಾಲ್ಲೂಕು ಮಟ್ಟದ ಈ ಸಭೆಗೆ ಡಾ॥ ಅಂಬೇಡ್ಕರ್ ಜೀವನ ಮತ್ತು ತತ್ವಗಳನ್ನು ನಿಜವಾಗಿಯೂ ಅರಿಯಬೇಕಾಗಿರುವ ಸಮಾಜದ ಇನ್ನಿತರ ವರ್ಗಗಳ ಜನರನ್ನು ಆಕರ್ಷಿಸುವಲ್ಲಿ ವಿಫಲವಾಗಿದ್ದು ಗೋಚರಿಸುತ್ತಿತ್ತು

(ವರದಿ : ವಸಂತಕುಮಾರ್ ಹರ್ಡೀಕರ್)

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಶಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚು ಕೂಟ, ಕೊಪ್ಪ